
ಸಂಚಿಕೆ
೧೫
ಮಾರ್ಚ್, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



Karnataka Cultural Organization – Brindavana (KCOB) 501(C)(3), NJ

Copyright © KCO – Brindavana

೧೫

ಮಾರ್ಚ್, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಸಂಪಾದಕ ವರ್ಗ


ಸತ್ಯ ಪ್ರಸಾದ್


ಭಾಸ್ಕರ ತೈಲಗೇರಿ


ಅನಿಲ್ ಭಾರಧ್ವಾಜ


ಉಮಾ ಮೂರ್ತಿ


ಲಕ್ಷ್ಮಿ ಕೊಲಾಲ್


ಪ್ರಶಾಂತ ಎಂ.


ಅಮೂಲ್ಯ ಕಟ್ಟೀಮನಿ

ಮುಖಪುಟ ಚಿತ್ರ
ಕಾಲಚಕ್ರ
ಕೊನಾರ್ಕ್ ದೇವಸ್ಥಾನ

ಸಂಪಾದಕೀಯ ಪುಟ ಚಿತ್ರ:
ಮಹಾಮಸ್ತಕಾಭಿಷೇಕ ೨೦೧೮

ಚಿತ್ರ ಕೃಪೆ : ಅಂತರ್ಜಾಲ



ಈ ಸಂಚಿಕೆಯಲ್ಲಿ....


| | |
|---|---|
| ಸಂಪಾದಕೀಯ | ಪು ೧ |
| ಧರ್ಮವಾಣಿ | ಪು ೨-೩ |
| ನಿನ್ನೊಲುಮೆಯಿಂದಲೇ | ಪು ೪-೮ |
| ಬರಹ | ಪು ೯ |
| ಕಿಶೋರ ವಾಣಿ | ಪು ೧೦-೧೧ |
| ಸವಿ ರುಚಿ | ಪು ೧೧ |
| ಮಹಿಳಾವಾಣಿ | ಪು ೧೨-೧೪ |
| ಹಿನ್ನೋಟ | ಪು ೧೫ |
| ನಾವು ನೋಡಿದ ಸಿನಿಮಾ | ಪು ೧೬ |


### ಸಂಪಾದಕ ವರ್ಗದಿಂದ......

**ನ್ಯೂ** ಜೆರ್ಸಿಯ ಕನ್ನಡ ಬಳಗಕ್ಕೆ ಯುಗಾದಿಯ ಮತ್ತು ಹೊಸ ವರುಷದ ಶುಭಾಶಯಗಳು!!!

ಯುಗಾದಿಯೆಂದರೆ ಹೊಸವರುಷದ ಸಂಭ್ರಮ, ಸಡಗರ, ಬೇವು-ಬೆಲ್ಲ, ಸಿಹಿ ಹೋಳಿಗೆ ಊಟ, ಪಂಚಾಂಗಶ್ರವಣ, ವರುಷದ ಆಯವ್ಯಯ ಗಳ ಲೆಕ್ಕಾಚಾರ ಇತ್ಯಾದಿ.

ಪುರಾಣದ ಕಡೆ ಒಮ್ಮೆ ನೋಡಿದರೆ, ಯುಗಾದಿಯೆಂದರೆ ಯುಗದ ಆದಿ, ಅಕ್ಷರಶಃ ಪ್ರಪಂಚ,ಯುಗ ಆರಂಭವಾದ ದಿನ. ಲೋಕ ಸೃಷ್ಟಕರ್ತನಾದ ಬ್ರಹ್ಮದೇವನು ತನ್ನ ಸೃಷ್ಟಿ ಕಾರ್ಯವನ್ನು ವಸಂತ ಋತುವಿನ ಚೈತ್ರ ಮಾಸದ ಶುಕ್ಲ ಪಕ್ಷದಲ್ಲಿ ಆರಂಭಿಸಿದ ದಿನ, ಕಾಲ ಆರಂಭವಾದ ದಿನ ಆದುದರಿಂದಲೇ ಈ ದಿನಕ್ಕೆ ಹೆಚ್ಚಿನ ಮಹತ್ವ.

ಈ ವರುಷ ತಮ್ಮೆಲ್ಲರಿಗೂ ಹೆಚ್ಚಿನ ಸಂತೋಷ, ನೆಮ್ಮದಿ ನೀಡಲೆಂದು ಬೃಂದಾವನ ತಂಡ ಹಾರೈಸುತ್ತದೆ.

ಬೃಂದಾವನ ಸಂಪಾದಕ ಮಂಡಳಿಯಲ್ಲೊಂದು ಸಣ್ಣ ಬದಲಾವಣೆ:

ಹೋದ ಒಂದು ವರುಷದಿಂದ, ಪ್ರತಿಭಾವಂತ ಗೆಳೆಯ ರಾಘವೇಂದ್ರ ಕುಂದಲಗುರ್ಕಿ ಸಾರಥ್ಯದಲ್ಲಿ ಬೃಂದಾವನ ವಾಣಿ ಹೊರಹೊಮ್ಮುತ್ತಿತ್ತು ಮತ್ತು ನಮ್ಮ ಅನಿವಾಸಿ ಕನ್ನಡಿಗರ ಹೆಮ್ಮೆಯ ಲೇಖಕಿ ಕಾವ್ಯ ಕಡಮೆ ಯವರು ಸಂಪಾದಕವರ್ಗದಲ್ಲಿ ಕಳೆದ ಮೂರು ವರುಷಗಳಿಂದ ಸಕ್ರಿಯರಾಗಿದ್ದರು. ಇವರಿಬ್ಬರೂ ಇತರೆ ಕಾರ್ಯಗಳ ಒತ್ತಡದಿಂದ ವಾಣಿಯಲ್ಲಿ ಪಾಲ್ಗೊಳ್ಳಲಾಗುತ್ತಿಲ್ಲ, ವಾಣಿ ತಂಡ ಇವರನ್ನು ತುಂಬಾ ಮಿಸ್ ಮಾಡಿಕೊಳ್ಳುತ್ತಿದೆ.

ಬದಲಾವಣೆ ಪ್ರಕೃತಿಯ ನಿಯಮ, ಕನ್ನಡ ಸಾಹಿತ್ಯದಲ್ಲಿ ಅಪಾರ ಆಸಕ್ತಿಯುಳ್ಳ ಉಮಾ ಮೂರ್ತಿ ಮತ್ತು ಲಕ್ಷ್ಮಿ ಕೊಲಾಲ್, ವಾಣಿ ತಂಡಕ್ಕೆ ಹೊಸದಾಗಿ ಸೇರ್ಪಡೆಯಾಗಿದ್ದಾರೆ, ಅವರಿಗೆ ಹೃತ್ಪೂರ್ವಕ ಸುಸ್ವಾಗತ.

ತುಂಬ ಅಚ್ಚುಕಟ್ಟಾಗಿ 'ಯುಗಾದಿ ವಿಶೇಷಾಂಕ' ರೂಪಿಸಿದ ಇಡೀ ತಂಡಕ್ಕೆ ನನ್ನ ಅನಂತ ಧನ್ಯವಾದಗಳು.

ಮುಂದಿನ ಸಂಚಿಕೆಯಲ್ಲಿ ಸಿಗೋಣ.

*-ಸತ್ಯ*

ಯುಗಗಳು ಉರುಳಿದರೇನು
ವರುಷಗಳು ಮರಳಿದರೇನು
ಬೇವು ಬೆಲ್ಲದ ಮಿಲನದಂತೆ
ನಮ್ಮೆಲ್ಲರ ಜೀವನವು ಅಲ್ಲವೇನು...

ಅರಿಶಿನವು ಪಸರಿಸಿದೆ ಆನಂದವನು
ಕುಂಕುಮವು ಮೇಳೈಸಿದೆ ಕಣ್ಮನವನು
ಶ್ರೀಗಂಧದ ಪರಿಮಳದ ಈ ಪರಿಯನು
ನೀಡಿದ ಕನ್ನಡ ನಾಡಿಗೆ ಶುಭ ಕೋರುವೆನು....

ಎಂದು ಹೇಳುತ್ತಾ ಯುಗಾದಿ ವಿಶೇಷಾಂಕ ಸಂಚಿಕೆಯನ್ನು ಸ್ವಾಗತಿಸಿ ಬರಮಾಡಿದ ಬೃಂದಾವನ ವಾಣಿಯ ತಂಡಕ್ಕೆ ಹೃತ್ಪೂರ್ವಕ ವಂದನೆಗಳು.

*- ಲಕ್ಷ್ಮಿ ಕೊಲಾಲ್*

**ಬೃಂದಾವನ** ವಾಣಿಯ ಸಮಸ್ತ ಓದುಗರಿಗೆ ಯುಗಾದಿಯ ಶುಭಾಶಯಗಳು. ಹೊಸ ಸಂವತ್ಸರ ನಮ್ಮೆಲ್ಲ ಓದುಗರಿಗೆ ಹೊಸ ಆರಂಭ, ಚೇತನ ತರಲಿ, ಸಂತಸ, ಸಮೃದ್ಧಿ ಹೆಚ್ಚಿಸಲಿ ಎಂದು ವಾಣಿಯ ಸಂಪಾದಕ ವರ್ಗ ಹಾರೈಸುತ್ತದೆ.

ಯುದ್ಧ, ಭಯೋತ್ಪಾದನೆ ನೆರಳಿನ ಭೀತಿಯಲ್ಲಿರುವ ವಿಶ್ವಕ್ಕೆ ಶಾಂತಿಯ ಸಂದೇಶ ನೀಡುವ ಈ ಶತಮಾನದ ೨ನೆಯ ಮಹಾಮಸ್ತಕಾಭಿಷೇಕ ಜೈನ ಕಾಶಿಯಾದ ಶ್ರವಣಬೆಳಗೊಳದಲ್ಲಿ ಇತ್ತೀಚೆಗೆ ವಿಜೃಂಭಣೆಯಿಂದ ನಡೆಯಿತು. ವಿಶೇಷ ಜರ್ಮನ್ ತಂತ್ರಜ್ಞಾನವನ್ನು ಬಳಸಿ ೫೦೦೦ ಭಕ್ತಾದಿಗಳು ಕುಳಿತುಕೊಳ್ಳುವ ಅಟ್ಟಣಿಗೆ ಹಾಗು ಲಿಫ್ಟ್ ಗಳ ವ್ಯವಸ್ಥೆ ಈ ಸಲದ ವಿಶೇಷವಾಗಿತ್ತು. ಮಹಾಮಸ್ತಕಾಭಿಷೇಕದ ಸ್ಮರಣಾರ್ಥ ಶಾಶ್ವತ ಯೋಜನೆಗಳ ಪೈಕಿ ಪ್ರಾಕೃತ ವಿಶ್ವವಿದ್ಯಾನಿಲಯ ನಿರ್ಮಾಣವಾಗಿದೆ. ಪ್ರತೀ ಹನ್ನೆರಡು ವರುಷಕ್ಕೊಮ್ಮೆ ನಡೆಯುವ ಈ ಶಾಂತಿದೂತನ ಮಹಾ ಮಜ್ಜನದಲ್ಲಿ ಪಾಲ್ಗೊಂಡು ಭಕ್ತಾದಿಗಳು ಕೃತಾರ್ಥರಾದರು.

ಒಂದೆಡೆ ಶಾಂತಿ ಸಂದೇಶ ನೀಡುವ ಮಹಾಮಸ್ತಕಾಭಿಷೇಕ ನಡೆಯುತ್ತಿದ್ದರೆ, ಇನ್ನೊಂದೆಡೆ ಫ್ಲಾರಿಡಾದ ಪಾರ್ಕ್ ಲ್ಯಾಂಡ್ ಪ್ರೌಢಶಾಲೆಯಲ್ಲಿ ವ್ಯಾಲೆಂಟೈನ್ ದಿವಸ ನಡೆದ ಗುಂಡಿನ ಧಾಳಿಗೆ ೧೭ ಮುಗ್ಧ ಜೀವಗಳು ಬಲಿಯಾಗಿದ್ದು ವಿಷಾದಕರ. ಪದೇ ಪದೇ ನಡೆಯುತ್ತಿರುವ ಇಂಥಹ ಮಾರಣ ಹೋಮಕ್ಕೆ ಕೊನೆ ಎಂದು?

ಸಮೂಹ ಶೂಟಿಂಗ್, ಖ್ಯಾತ ತಾರೆಯರಾದ ಶ್ರೀದೇವಿ, ಕಾಶೀನಾಥ್, ಚಂದ್ರಶೇಖರ್ ಮುಂತಾದವರ ಅನಿರೀಕ್ಷಿತ ಅಗಲುವಿಕೆ, ಇವೆಲ್ಲವನ್ನೂ ನೋಡಿದಾಗ ಜೀವನದ ಪ್ರತಿಯೊಂದು ಕ್ಷಣವೂ ಎಷ್ಟೊಂದು ಅಮೂಲ್ಯ ಎಂದೆನಿಸದೇ ಇರದು. ಜನನ, ಮರಣಗಳ ನಡುವೆ ಇರುವುದು ಪ್ರೀತಿಯೊಂದೇ. ಡಾ. ದ. ರಾ. ಬೇಂದ್ರೆಯವರ ಸಾಲುಗಳು "ರಸವೇ ಜನನ, ವಿರಸವೇ ಮರಣ, ಸಮರಸವೇ ಜೀವನ" ನಮ್ಮ ಒತ್ತಡದ ಬದುಕಿನ ದೈನಂದಿನ "ವೈಟಮಿನ್" ಆಗಲಿ.

ನ್ಯೂಜಿಲೆಂಡ್ ನಲ್ಲಿ ನಡೆದ ೧೯ ವರ್ಷದೊಳಗಿನ ಕಿರಿಯರ ವಿಶ್ವಕಪ್ ಕ್ರಿಕೆಟ್ ಕಿರೀಟ ಈ ಸಲ ಭಾರತದ ಕಿರಿಯರ ಪಾಲಾಯಿತು. ಇದರಿಂದ ಹಲವು ಯುವ ಪ್ರತಿಭೆಗಳು ಭಾರತ ಕ್ರಿಕೆಟ್ ನ ಭವಿಷ್ಯದ ಆಟಗಾರರಾಗಿ ಹೊರ ಹೊಮ್ಮಿದ್ದಾರೆ. ಇವರ ಪ್ರೀತಿಯ ಯಶಸ್ವೀ ಕೋಚ್ ಕನ್ನಡಿಗ ರಾಹುಲ್ ದ್ರಾವಿಡ್ ಆಗಿರುವುದು ನಮ್ಮೆಲ್ಲರಿಗೆ ಹೆಮ್ಮೆ!

ವಾಣಿಯು ಈ ಸಂಚಿಕೆಯಿಂದ ಕನ್ನಡ ಕಲಿಕೆ ಜೊತೆಗೆ ಕೈ ಜೋಡಿಸಿ, ಕನ್ನಡ ಉಳಿಸಿ, ಬೆಳೆಸುವ ಉದ್ದೇಶದೊಂದಿಗೆ ಕಿಶೋರ ವಾಣಿಯನ್ನು ಪ್ರಾರಂಭಿಸುತ್ತಿದೆ. ಅಮೇರಿಕಾದಲ್ಲಿ ಕನ್ನಡ ಕಲಿಯುತ್ತಿರುವ ಮಕ್ಕಳ ಕನ್ನಡ ಬರೆಯುವ ಹಾಗು ಓದುವ ಹವ್ಯಾಸವನ್ನು ಪ್ರೋತ್ಸಾಹಿಸುವ ಸಲುವಾಗಿ, ಅವರು ಬರೆದ ರೀತಿಯಲ್ಲೇ ಪ್ರಕಟಿಸುತ್ತಿದ್ದೇವೆ. ಮುಂದಿನ ಸಂಚಿಕೆಗಳಲ್ಲಿ ಹೆಚ್ಚಿನ ಲೇಖನಗಳು ನಮ್ಮ ಕಿರಿಯರಿಂದ ಬರಲಿ ಎಂದು ಆಶಿಸುತ್ತೇವೆ.

ಈ ಸಂಚಿಕೆಯಲ್ಲಿ ಹಬ್ಬ ಹರಿದಿನಗಳ ಆಚರಣೆಯಿಂದ ಆಗುವ ಉಪಯೋಗ, ಕೆ. ಎಸ್. ನರಸಿಂಹ ಸ್ವಾಮಿಯವರ ಸ್ಮರಣಾರ್ಥ 'ನಿನ್ನೊಲುಮೆಯಿಂದಲೇ' ಶೀರ್ಷಿಕೆಯಡಿ ಲೇಖನಗಳು ಹಾಗೂ ಕವನಗಳು, ರುಚಿಕರವಾದ ಹಬ್ಬದಡುಗೆಯ ಮಾಹಿತಿಗಳು ಪ್ರಕಟವಾಗಿವೆ. ಹೀಗೆ ಹತ್ತು ಹಲವು ವಿಶೇಷ ಲೇಖನಗಳನ್ನು ಹೊಂದಿರುವ ವಾಣಿಯನ್ನು ಓದಿ, ಅನಿಸಿಕೆಗಳನ್ನು ತಿಳಿಸಿ.

*-ಉಮಾ ಮೂರ್ತಿ*



Copyright © KCO – Brindavana

ಸಂಚಿಕೆ
೧೫
ಮಾರ್ಚ್, ೨೦೧೮



## *ಹಬ್ಬ ಹರಿದಿನಗಳ ಆಚರಣೆಯಿಂದ ಉಪಯೋಗವೇನು?*



ಡಾ|| ಎಂ.ಜಿ.ಪ್ರಸಾದ್

**ಪೀಠಿಕೆ**

ಮನುಷ್ಯರೆಲ್ಲರಿಗೂ ಎಲ್ಲ ಕಾಲದಲ್ಲಿಯೂ ತಮ್ಮ ಜೀವನವನ್ನು ಸಂತೋಷದಿಂದ ಕಳೆಯಬೇಕೆಂಬ ಸಹಜವಾದ ಆಸೆಯಿರುವುದು ತಿಳಿದ ವಿಷಯ. ಇದರ ಜೊತೆಗೆ ಎಲ್ಲರಿಗೂ ತಿಳಿದ ಮತ್ತೊಂದು ವಿಷಯವೇನೆಂದರೆ ಎಲ್ಲರ ಜೀವನದ ಮೇಲೆಯೂ ಕಾಲದ ಮಹತ್ವಪೂರ್ಣ ಪ್ರಭಾವ ಇದೆ ಎನ್ನುವುದು. ಈ 'ಕಾಲ'ದ ಸ್ವರೂಪ, ರೂಪ, ಗುಣ ಮತ್ತು ಪ್ರಭಾವಗಳ ಬಗ್ಗೆ ಮತ್ತು ಮುಖ್ಯವಾಗಿ ಇವುಗಳಿಂದ ನಾವು ಪಡೆಯಬಹುದಾದ ಉಪಯೋಗದ ಬಗ್ಗೆ ಸನಾತನ ಧರ್ಮದ ಋಷಿಗಳು ಯೋಗ ವಿಜ್ಞಾನದ ಮೂಲಕ ಸಂಶೋಧನೆಗಳನ್ನು ನಡೆಸಿದ್ದಾರೆ. ಈ ಸಂಶೋಧನೆಗಳ ಫಲವಾಗಿ ಬಂದ ಜ್ಞಾನದ ಆಧಾರದ ಮೇಲೆ ಹಬ್ಬ-ಹರಿದಿನಗಳ ಆಚರಣೆಯ ಸಂಪ್ರದಾಯವನ್ನು ನಮ್ಮ ಸರ್ವತೋಮುಖ ಒಳಿತಿಗಾಗಿ ನೀಡಿದ್ದಾರೆ.

**ಸನಾತನ ಧರ್ಮದಲ್ಲಿ ಕಾಲದ ಮಹತ್ವ**

ಕಾಲದ ಪ್ರಭಾವವು ಎಲ್ಲರಿಗೂ ಅನುಭವಕ್ಕೆ ಬಂದ ವಿಷಯವಾದರೂ "ಕಾಲವೆಂದರೆ ಏನು?" ಎಂಬುದು ಬಹಳ ಗಹನವಾದ ಪ್ರಶ್ನೆ ಎಂಬುದು ಎಲ್ಲರ ಅರಿವಿಗೆ ಬರುತ್ತದೆ. ಈ ಪ್ರಶ್ನೆಯನ್ನು ಬಹಳ ಹಿಂದಿನ ಕಾಲದಿಂದಲೂ ವಿಶ್ವದಾದ್ಯಂತ ದಾರ್ಶನಿಕರು, ವಿಜ್ಞಾನಿಗಳು, ಚಿಂತನ ಶೀಲರು ಚಿಂತನೆ ಮಾಡಿದ್ದಾರೆ. ಸನಾತನ ಧರ್ಮ ಪರಂಪರೆಯಲ್ಲಿನ ಋಷಿಗಳೂ, ಯೋಗಿಗಳೂ, ದಾರ್ಶನಿಕರೂ ಸಂಶೋಧನೆ ನಡೆಸಿ ಆಧಿಭೌತಿಕ (Physical), ಆಧಿದೈವಿಕ (Metaphysical), ಮತ್ತು ಆಧ್ಯಾತ್ಮಿಕ (Spiritual) ಸ್ತರಗಳಲ್ಲಿ ಕಾಲದ ಪ್ರಭಾವಗಳನ್ನು ವಿವರಿಸಿದ್ದಾರೆ. ಋಷಿಗಳ ದೃಷ್ಟಿಯಿಂದ ಕಾಲವೆಂಬುದು ವಿಶ್ವನಿಯಾಮಕನಾದ ಭಗವಂತನ ಶಕ್ತಿ. ಮೂರ್ತ ರೂಪದಲ್ಲಿ ನೋಡಿದಾಗ ವಿಷ್ಣು ಅಥವಾ ವೆಂಕಟೇಶ್ವರನ ಮೇಲಿನ ಬಲಗೈಯಲ್ಲಿರುವುದು ಸುದರ್ಶನ ಚಕ್ರಾಯುಧ ತತ್ವ. ಕಾಲಚಕ್ರವು ಅದಕ್ಕೆ ಅಧೀನ. ವಿಷ್ಣು ಧರ್ಮೋತ್ತರ ಪುರಾಣವು **"ಕಲನಾತ್ಸರ್ವಭೂತಾನಾಂ ಸಕಾಲಃ ಪರಿಕೀರ್ತಿತಃ"** ಎಂದರೆ, 'ಎಲ್ಲವನ್ನೂ (ಎಲ್ಲಾ ವಸ್ತುಗಳನ್ನೂ" ಲೆಕ್ಕಿಸುವುದರಿಂದ ಅಥವಾ ಅಳೆಯುವುದರಿಂದ ಅದು ಕಾಲ" ಎಂದು ವರ್ಣಿಸುತ್ತದೆ. ಕಾಲವು ಭಗವಂತನ ಶಕ್ತಿಯಾದುದರಿಂದ ಅದು ಭಗವಂತನಿಗೆ ಅಧೀನ ಎನ್ನುವುದನ್ನು ಶಿವ ಪುರಾಣದಲ್ಲಿ **"ಶಿವಸ್ಯ ತು ವಶೇ ಕಾಲಃ ನ ಕಾಲಃ ವಶೇ ಶಿವಃ"** ಎಂದು ಹೇಳಿದೆ. ಕಾಲವನ್ನು ಭಗವಂತನ ಶರೀರವೆಂದೂ, ಭಗವಂತನು ಕಾಲಕ್ಕೆ ಪ್ರಭುವಾದ್ದರಿಂದ ಅವನನ್ನು ಕಾಲ ಶರೀರಿ ಎಂದು ವರ್ಣಿಸಿದ್ದಾರೆ.

ಎಲ್ಲರಿಗೂ ತಿಳಿದಂತೆ ಕಾಲದ ಗತಿಯನ್ನೇ ನಾವು ದಿನ, ರಾತ್ರಿ, ವಾರ, ತಿಂಗಳು, ವರ್ಷ ಮತ್ತು ಋತುಗಳು ಇತ್ಯಾದಿಯಾಗಿ ಹೇಳುತ್ತೇವೆ. ಕಾಲಗತಿಯಂತೆ ವಾತಾವರಣದಲ್ಲೂ, ನಿಸರ್ಗದಲ್ಲೂ ಬದಲಾವಣೆಗಳಾಗುತ್ತವೆ. ಈ ಬದಲಾಗುವ ಋತುಗಳಿಂದ ಮನುಷ್ಯನ ದೇಹ ಮತ್ತು ಮನಸ್ಸುಗಳ ಮೇಲೆ ಪ್ರಭಾವ ಉಂಟಾಗುತ್ತದೆ. ಅದೇ ರೀತಿ ಗ್ರಹಗಳ ಚಲನೆಯಿಂದಲೂ ಮನುಷ್ಯನ ಮನೋದೇಹಗಳ ಮೇಲೆ ಬಹಳ ಪ್ರಭಾವ ಇರುತ್ತದೆ.

**ಹಬ್ಬ-ಹರಿದಿನ ಎಂದರೇನು?**

ಹಬ್ಬ ಎನ್ನುವ ಪದವು ಮೂಲ ಸಂಸ್ಕೃತದ 'ಪರ್ವ' ಎನ್ನುವ ಪದವು 'ಪರ್ಬ' ಎಂದಾಗಿ, ನಂತರ 'ಹಬ್ಬ' ಎಂದು ರೂಪಾಂತರಗೊಂಡಿದೆ. 'ಪರ್ವ' ಎಂದರೆ ಎರಡು ಮುಖ್ಯವಾದ ಅರ್ಥಗಳಿವೆ. ಒಂದನೆಯದು ಕಾಲದಲ್ಲಿನ ಸಂಧಿಸ್ಥಾನ. ಉದಾಹರಣೆಗೆ ಸೂರ್ಯೋದಯ ಮತ್ತು ಸೂರ್ಯಾಸ್ತಮಾನಗಳು ಹೇಗೆ ದಿನ ರಾತ್ರಿಗಳ ಸಂಧಿಸ್ಥಾನ ಅಥವಾ ಸಂಧಿ ಕಾಲವಾಗುತ್ತವೆಯೋ ಹಾಗೆ ಸೂರ್ಯನ ಸುತ್ತ ಭೂಮಿಯ ತಿರುಗುವಿಕೆಯಲ್ಲಿ ಮತ್ತು ಭೂಮಿಯ ಸುತ್ತ ಚಂದ್ರನ ತಿರುಗುವಿಕೆಯಲ್ಲಿ ಅನೇಕ ವಿಶೇಷ ಸಂಧಿಸ್ಥಾನಗಳು ಬರುತ್ತವೆ. ಈ ಸಂಧಿಸ್ಥಾನಗಳ ಸಮಯದಲ್ಲಿ ಅಂದರೆ ಪರ್ವಗಳಲ್ಲಿ ವಿಶೇಷ ಶಕ್ತಿಯಿರುತ್ತದೆ. ಮಹಾಯೋಗಿ ಮತ್ತು ಜ್ಞಾನಿಯಾದ ಶ್ರೀರಂಗ ಸದ್ಗುರುಗಳ ಮಾತಿನಲ್ಲಿ "ತನ್ನ ಕಾಲ ರೂಪವಾದ ಶರೀರದಲ್ಲಿ ಭಗವಂತನು ಗೊತ್ತಾದ ಸ್ಥಾನಗಳಲ್ಲಿ ಜೀವಿಗಳಿಗೆ ಅವುಗಳ ಉದ್ಧಾರಕ್ಕಾಗಿ ಒದಗಿಸಿಕೊಡುವ ಸೌಲಭ್ಯಗಳು- 'ಪರ್ವಗಳು'. ಆ ಅನುಗ್ರಹದ ಉಪಯೋಗವನ್ನು ಕಳೆದುಕೊಳ್ಳಬಾರದು". ಆದ್ದರಿಂದಲೇ ಸನಾತನ ಧರ್ಮದ ಸಂಪ್ರದಾಯದಲ್ಲಿ ನಮ್ಮ ಒಳಿತಿಗಾಗಿ ಈ ಪರ್ವಗಳ ಅಥವಾ ಹಬ್ಬಗಳ ಸಮಯದಲ್ಲಿ ವಿಶೇಷವಾದ ಆಚರಣೆಗಳು ಬಂದಿವೆ. ಪರ್ವ ಶಬ್ದಕ್ಕೆ ಇನ್ನೊಂದು ಅರ್ಥವಿದೆ. ಆ ಅರ್ಥವೇ 'ಗಿಣ್ಣು' ಅಥವಾ 'ಗ್ರಂಥಿ'. ಅಂದರೆ ಗಿಡ ಮರ ಬಳ್ಳಿ ಮತ್ತು ಬೆರಳುಗಳಲ್ಲಿರುವ ಒಂದು ಮುಖ್ಯವಾದ ಭಾಗ. ಗಿಡ ಮರ ಬಳ್ಳಿಗಳಲ್ಲಿ ಗಿಣ್ಣು ಹೇಗೆ ಪ್ರಮುಖ ಭಾಗವಾಗಿ ಬಹಳವಾಗಿ ಉಪಕರವಾಗಿದೆಯೋ ಹಾಗೆಯೇ ಪರಮಾತ್ಮನ ಶರೀರದಂತಿರುವ ಕಾಲದಲ್ಲಿನ ಸಂಧಿಸ್ಥಾನಗಳೇ ಪರ್ವಗಳು ಅಥವಾ ಹಬ್ಬಗಳು.



ಹಬ್ಬದ ಮತ್ತೊಂದು ಮುಖ್ಯವಾದ ಅರ್ಥವೇ ಉತ್ಸವ. 'ಉತ್ಸವ' ಎನ್ನುವ ಸಂಸ್ಕೃತ ಪದದ ಅರ್ಥವೇನೆಂದರೆ "ಸಂತೋಷ ಉಂಟುಮಾಡುವ ಸಮಾರಂಭ". ಇಲ್ಲಿ ಸಂತೋಷ ಎಂದರೆ ಕೇವಲ ದೇಹ ಮತ್ತು ಇಂದ್ರಿಯಗಳಿಗೆ ಮಾತ್ರ ಎಂದಲ್ಲ. ಮನಸ್ಸು ಮತ್ತು ಬುದ್ಧಿಯನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ದು 'ಆಧ್ಯಾತ್ಮಿಕ ಆನಂದ' ನೀಡುವುದು ಎಂಬ ಅರ್ಥವೂ ಸೇರುತ್ತದೆ. ಉತ್ಸವ ಎಂದಾಗ ನಮ್ಮ ಮನಸ್ಸನ್ನು ಊರ್ಧ್ವಮುಖವಾಗಿ ಕರೆದೊಯ್ಯುವುದು ಎಂದಾಗುತ್ತದೆ. ಒಟ್ಟಿನಲ್ಲಿ ಹಬ್ಬಗಳನ್ನು ಆಚರಿಸಿದಾಗ ನಮ್ಮ ಮನಸ್ಸು ಉನ್ನತ ಸ್ಥಾನಕ್ಕೆ ಹೋಗಿ ನಿಲ್ಲಬೇಕು. ಇನ್ನು ಹರಿದಿನ ಎಂದರೆ ಪರಮಾತ್ಮನ ಪೂಜೆಯನ್ನು ಮಾಡುವ ವಿಶೇಷ ದಿನ. ಹಬ್ಬಗಳಲ್ಲಿ ಭಗವಂತನ ಪೂಜೆಯ ನಂತರ ನಮ್ಮಗಳ ಸಂತೋಷಕ್ಕೂ ಸಂಪ್ರದಾಯಕ್ಕೆ ಅನುಗುಣವಾದ ಊಟ, ಬಟ್ಟೆ, ಆಟ ಇತ್ಯಾದಿಗಳುಂಟು. ಆದರೆ ಹರಿದಿನಗಳಲ್ಲಿ ಪರಮಾತ್ಮನ ಪೂಜೆಯೇ ಪ್ರಧಾನವಾಗಿದ್ದು ನಾವು ಅದಕ್ಕೆ ಬೇಕಾದ ನಿಯಮಗಳನ್ನು ಪಾಲಿಸಬೇಕು. ಉದಾಹರಣೆಗೆ ಯುಗಾದಿಯು ಹಬ್ಬ. ಏಕಾದಶಿಯು ಹರಿದಿನ. ಹಾಗೆಯೇ ಮಹಾಶಿವರಾತ್ರಿ ಮತ್ತು ಏಕಾದಶಿಯನ್ನು ಉಪವಾಸದ ಹಬ್ಬ ಎಂದು ಕರೆಯುವುದೂ ಉಂಟು.

**ಹಬ್ಬ- ಹರಿದಿನಗಳ ಆಚರಣೆ ಏಕೆ?**

ಹಬ್ಬ-ಹರಿದಿನವೆಂದರೇನು? ಎನ್ನುವ ಪ್ರಶ್ನೆಯನ್ನು ಸ್ವಲ್ಪ ಆಳವಾಗಿ ವಿಚಾರ ಮಾಡಿದ್ದರಿಂದ ನಮ್ಮ ಜೀವನದಲ್ಲಿ ನಮ್ಮ ಮನಸ್ಸನ್ನು ನಿಜವಾದ ಸಂತೋಷ ಹಾಗೂ ಶಾಂತಿಯ ಸ್ಥಾನಕ್ಕೆ ಕೊಂಡೊಯ್ಯುವ ಸಾಧನೆಗಳೇ ಹಬ್ಬ ಹರಿದಿನಗಳು ಎಂಬ ಅರಿವು ಮೂಡಿತು. ನಾವು ಮನೆಯಲ್ಲಿ ಕುಟುಂಬದೊಡನೆ ಹಬ್ಬವನ್ನಾಚರಿಸಿದಾಗ ಎಲ್ಲರಿಗೂ ಸಂತೋಷವುಂಟಾಗುತ್ತದೆ. ನಾವು ಆಚರಿಸುವ ಯಾವುದೇ ಹಬ್ಬದ ಬಗ್ಗೆಯಾಗಲೀ ಮತ್ತಷ್ಟು ವಿಚಾರ ಮಾಡಿದಾಗ, ಅದರ ನಾಲ್ಕು ಆಯಾಮಗಳ ಅನುಭವಗಳು ತಿಳಿಯುತ್ತವೆ. ಅವುಗಳನ್ನು ಸಂಕ್ಷಿಪ್ತವಾಗಿ ವಿಚಾರ ಮಾಡೋಣ. ಹಬ್ಬಗಳ ಆ ನಾಲ್ಕು ಆಯಾಮಗಳೆಂದರೆ- ಮೊದಲನೆಯದಾಗಿ ಆಧ್ಯಾತ್ಮಿಕ ಆಯಾಮ, ಎರಡನೆಯದಾಗಿ ತಾತ್ವಿಕ ಆಯಾಮ, ಮೂರನೆಯದಾಗಿ ಸಾಂಪ್ರದಾಯಿಕ ಆಯಾಮ ಮತ್ತು ನಾಲ್ಕನೆಯದಾಗಿ ಸಾಂಸ್ಕೃತಿಕ ಆಯಾಮ.

(ಮುಂದಿನ ಪುಟಕ್ಕೆ...)

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಹಬ್ಬ ಹರಿದಿನಗಳ ಆಚರಣೆಯಿಂದ ಉಪಯೋಗವೇನು?

ಮೊದಲನೆಯದಾದ ಆಧ್ಯಾತ್ಮಿಕ ಆಯಾಮದಲ್ಲಿ ಹಬ್ಬವು ಪ್ರತಿಯೊಬ್ಬನಲ್ಲಿಯೂ ಆನಂದಾನುಭವವನ್ನು ಉಂಟುಮಾಡುವ ಶಕ್ತಿಯನ್ನು ಹೊಂದಿದೆ. ಆ ಶಕ್ತಿಯೇ ನಾವು ಹಿಂದೆ ವಿಚಾರ ಮಾಡಿದ ಕಾಲದ ಶಕ್ತಿ. ಈ ಶಕ್ತಿ ಬರುವುದಕ್ಕೆ ಎರಡನೆಯ ಭಾಗವಾದ ತಾತ್ವಿಕ ಆಯಾಮ ಕಾರಣ ಎನ್ನಬಹುದು. ಏಕೆಂದರೆ ಹಬ್ಬದ ತತ್ವವೇ ಒಳ್ಳೆಯ ಗುಣ ಮತ್ತು ಕೆಟ್ಟ ಗುಣಗಳ ನಡುವೆ ಸಂಘರ್ಷ ಉಂಟಾದಾಗ ಒಳ್ಳೆಯ ಗುಣ ಗೆಲ್ಲುವುದು. ಎಲ್ಲರಿಗೂ ತಿಳಿದಂತೆ ಮನುಷ್ಯನಲ್ಲಿ ಒಳ್ಳೆಯ ಮತ್ತು ಕೆಟ್ಟ ಗುಣಗಳೆರಡೂ ಇದ್ದು, ಅವುಗಳ ಮಧ್ಯೆ ಸಂಘರ್ಷ ಉಂಟಾಗುತ್ತಿರುತ್ತದೆ. ಒಳ್ಳೆಯ ಗುಣಗಳು ಗೆದ್ದಾಗ ಮನುಷ್ಯನಲ್ಲಿ ಸಾತ್ವಿಕತೆ ಉಂಟಾಗಿ ಅದರಿಂದ ಸಾತ್ವಿಕ ಆನಂದದ ಅನುಭವ ಉಂಟಾಗುತ್ತದೆ. ಈ ತಾತ್ವಿಕ ಭಾಗಕ್ಕೆ ಆಧಾರವೇ ಮೂರನೆಯ ಆಯಾಮವಾದ ಸಾಂಪ್ರದಾಯಿಕ ಭಾಗ. ಈ ಭಾಗದಲ್ಲಿ ಪ್ರತಿ ಹಬ್ಬಕ್ಕೂ ಸಾಮಾನ್ಯವಾಗಿ ಒಂದು ಕಥೆ ಆಧಾರವಾಗಿರುತ್ತದೆ. ಸನಾತನ ಧರ್ಮಕ್ಕೆ (ಅಥವಾ ಹಿಂದೂ ಧರ್ಮಕ್ಕೆ) ಸಂಬಂಧಿಸಿದಂತೆ ಹಬ್ಬಗಳಿಗೆ ಹೊಂದುವ ಕಥೆಗಳನ್ನು ನೋಡಿದರೆ, ಅವು ಇತಿಹಾಸಗಳಾದ ರಾಮಾಯಣ ಹಾಗೂ ಮಹಾಭಾರತಗಳಿಂದ ಅಥವಾ ಪುರಾಣಗಳಿಂದ ಬಂದ ಕಥೆಗಳಾಗಿರುತ್ತವೆ. ಗಣಪತಿ,ರಾಮ,ಕೃಷ್ಣ,ಶಿವ, ದುರ್ಗಾ ಮುಂತಾದ ದೇವ ಹಾಗೂ ದೇವಿಯರಿಗೆ ಸಂಬಂಧಿಸಿದ ಹಬ್ಬಗಳಲ್ಲಿ ಅವರ ಕಥೆಗಳ ಜೊತೆಗೆ ಪೂಜೆಯೂ ಸಹ ಸಾಂಪ್ರದಾಯಿಕ ಭಾಗದಲ್ಲಿ ಸೇರುತ್ತದೆ. ನಂತರ ನಾಲ್ಕನೆಯದಾದ ಸಾಂಸ್ಕೃತಿಕ ಭಾಗವನ್ನು ನೋಡಿದರೆ ಪ್ರತಿಯೊಂದು ಹಬ್ಬಕ್ಕೂ ಅದರದೇ ಆದ ವಿಶೇಷವಾದ ಸಾಂಸ್ಕೃತಿಕ ಆಚರಣೆಯಿರುತ್ತದೆ. ಉದಾಹರಣೆಗೆ ನವರಾತ್ರಿ ಹಬ್ಬದಲ್ಲಿ ಮನೆಯಲ್ಲಿ ಗೊಂಬೆಗಳನ್ನು ಇಡುವುದು ಮತ್ತು ಪರಸ್ಪರ ಒಂದು ಕುಟುಂಬದವರು ಮತ್ತೊಂದು ಕುಟುಂಬದವರ ಮನೆಗೆ ಹೋಗಿ ಗೊಂಬೆಗಳನ್ನು ನೋಡಿ ಬರುವುದು- ಸಾಂಸ್ಕೃತಿಕತೆಯನ್ನು ಎತ್ತಿ ಹಿಡಿಯುತ್ತದೆ.

ನಾವು ಆಚರಿಸುವ ಪ್ರತಿ ಹಬ್ಬದಲ್ಲಿಯೂ ಆಧ್ಯಾತ್ಮಿಕ, ತಾತ್ವಿಕ, ಸಾಂಪ್ರದಾಯಿಕ ಮತ್ತು ಸಾಂಸ್ಕೃತಿಕ ಎಂಬ ಆಯಾಮಗಳನ್ನು ನೋಡಬಹುದು. ಈ ನಾಲ್ಕೂ ಭಾಗಗಳು ಕುಟುಂಬದ ಎಲ್ಲ ಸದಸ್ಯರಿಗೂ ಸಂತೋಷ ನೀಡುತ್ತದೆ. ಹಾಗೆಯೇ ಇದರಿಂದ ಸಮಾಜದಲ್ಲಿ ಸೌಹಾರ್ದತೆ ಮತ್ತು ಸಮನ್ವಯ ಏರ್ಪಡುತ್ತದೆ. ಪ್ರತಿ ಹಬ್ಬವೂ ಸರ್ವತೋಮುಖವಾದ ಪ್ರಭಾವ ಬೀರುತ್ತದೆ. ಆದ್ದರಿಂದ ಹಿಂದೂಗಳು ಯಾವ ದೇಶದಲ್ಲಿಯೇ ಇರಲಿ ತಮ್ಮ ಹಬ್ಬಗಳನ್ನು ಆಚರಿಸಬೇಕು.

**ಹಬ್ಬಗಳನ್ನು ಹೇಗೆ ಆಚರಿಸಬೇಕು?**

ಹಬ್ಬಗಳನ್ನು ನಾವು ಆಚರಿಸುವಾಗ ಮೇಲೆ ಹೇಳಿದ ಹಬ್ಬಗಳ ನಾಲ್ಕು ಆಯಾಮಗಳಾದ ಆಧ್ಯಾತ್ಮಿಕತೆ, ತಾತ್ವಿಕತೆ, ಸಂಪ್ರದಾಯ ಹಾಗೂ ಸಾಂಸ್ಕೃತಿಕತೆಯನ್ನು ಮನಸ್ಸಿನಲ್ಲಿಟ್ಟು ಆಚರಿಸಿದರೆ ನಮಗೆ ಸರ್ವತೋಮುಖವಾದ ಅನುಭವ ಉಂಟಾಗುತ್ತದೆ. ಹಬ್ಬಗಳನ್ನು ಕೇವಲ ಊಟ, ಬಟ್ಟೆ ಇತ್ಯಾದಿಯಾಗಿ ದೇಹದ ಮಟ್ಟದಲ್ಲೇ ಆಚರಿಸಿದರೆ ಹಬ್ಬದ ಪೂರ್ಣವಾದ ಅನುಭವ ಆಗುವುದಿಲ್ಲ. ಪ್ರತಿಯೊಂದು ಹಬ್ಬದಲ್ಲಿಯೂ ನಾವು ಯಥಾ ಶಕ್ತಿ ಮನಸ್ಸು ಮತ್ತು ಬುದ್ಧಿಗಳನ್ನು ಉನ್ನತವಾದ ಆಧ್ಯಾತ್ಮಿಕ ಮಟ್ಟದ ಆನಂದಕ್ಕೆ ಕರೆದೊಯ್ಯಬೇಕು. ಅದು ಆಗಬೇಕಾದರೆ ಆ ಹಬ್ಬಕ್ಕೆ ಅನ್ವಯವಾಗುವ ಕಥೆಯ ಅಂತರಾರ್ಥದ ಒಳ ತತ್ವಗಳನ್ನು ತಿಳಿದುಕೊಳ್ಳಬೇಕು. ಈ ತತ್ವಗಳನ್ನು ಮಕ್ಕಳಿಗೆ, ಯುವಕ ಹಾಗೂ ಯುವತಿಯರಿಗೆ ಹೇಳಬೇಕು. ನಂತರ ಹಬ್ಬಕ್ಕೆ ಸಂಬಂಧಪಟ್ಟ ಪೂಜೆ ಮತ್ತಿತರ ಸಂಪ್ರದಾಯಗಳನ್ನು ಆಚರಿಸಬೇಕು. ನಂತರ ಹಬ್ಬಕ್ಕೆ ಸಂಬಂಧಿಸಿದಂತಹ ಸಾಂಸ್ಕೃತಿಕ ಕಾರ್ಯಕಲಾಪಗಳನ್ನು ಆಚರಿಸಬೇಕು. ಹಬ್ಬವು ಕೇವಲ ನಮ್ಮ ಭೋಗಕ್ಕೆ ಸಾಧನವಾಗದೆ, ಭೋಗದ ಜೊತೆಗೆ ಯೋಗದ ಸಾಧನೆಯೂ ಆಗಬೇಕು. ಹಬ್ಬಹರಿದಿನಗಳ ಆಚರಣೆಯು ಪುರುಷಾರ್ಥಗಳ ಅಂದರೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳ ಸಾಧನೆಗೆ ಅನುಕೂಲಕರವಾಗಿರಬೇಕು. ಹಬ್ಬಗಳನ್ನು ಅವು ಬಂದ ಪರ್ವ ದಿನಗಳಲ್ಲಿಯೇ ಸಂಕ್ಷಿಪ್ತವಾಗಿಯಾದರೂ ಯಥಾಶಕ್ತಿ ಆಚರಿಸಬೇಕು. ಆಗ ಮಾತ್ರ ನಾವು ಹಬ್ಬಗಳ ಆಚರಣೆಗೆ ಉಪಯೋಗಿಸಿದ ಸಮಯ, ಶ್ರಮ ಮತ್ತು ಹಣ ಇವುಗಳ ಸದುಪಯೋಗವಾದಂತಾಗುತ್ತದೆ.

**ಯುಗಾದಿ ಹಬ್ಬದ ಆಚರಣೆ**

ಯುಗಾದಿ ಹಬ್ಬ ಭಾರತೀಯ ಸನಾತನ ಧರ್ಮದಲ್ಲಿ ರೂಪುಗೊಂಡ ಪಂಚಾಂಗದ (ಚಾಂದ್ರಮಾನ ಆಧಾರಿತ) ಹೊಸ ಸಂವತ್ಸರದ ಆರಂಭದ ದಿನ. ಸೂರ್ಯನ ಸುತ್ತಲೂ ಭೂಮಿ ಒಂದು ಸುತ್ತು ತಿರುಗಲು ಬೇಕಾದ ಕಾಲವೇ ಒಂದು ಸಂವತ್ಸರ. ಈ ಹಬ್ಬ ಅಥವಾ ಪರ್ವ ಭೂಮಿಯ ಹೊಸದಾದ ಮತ್ತೊಂದು ತಿರುವನ್ನು ಆರಂಭಿಸುವ ಮತ್ತು ಅದಕ್ಕನುಗುಣವಾಗಿ ಶುಭ ಸಂಕಲ್ಪವನ್ನು ಮಾಡಿಕೊಳ್ಳುವ ದಿನ. ಈ ಶುಭ ದಿನದಂದು ಮಾಡುವ ಸಂಕಲ್ಪವು ಅತ್ಯಂತ ಪ್ರಭಾವವನ್ನು ಬೀರುತ್ತದೆ. ಆದುದರಿಂದ ನಾವೆಲ್ಲರೂ ಎಲ್ಲ ರೀತಿಯಿಂದಲೂ ಅಂದರೆ ದೇಹ, ಮನಸ್ಸು ಮತ್ತು ಆತ್ಮಕ್ಕೆ ಸಂತೋಷ ತರುವ ಸಂಕಲ್ಪವನ್ನು ಮತ್ತು ಕಾರ್ಯಗಳನ್ನು ಯುಗಾದಿಯ ದಿನದಂದು ಮಾಡಬೇಕು. ಈ ದಿನದಂದು ಯಾವ ವಾರ ಇರುತ್ತದೆಯೋ ಅದರ ಗ್ರಹವನ್ನೇ ವರ್ಷದ ಅಧಿಪತಿ ಎಂದು ಕರೆಯುತ್ತಾರೆ. ಉದಾಹರಣೆಗೆ ಈ ವರ್ಷದ ಯುಗಾದಿಯ ದಿನ ಭಾನುವಾರ ಮಾರ್ಚ್ ೧೮, ಅಂದರೆ ಚೈತ್ರ ಮಾಸದ ಶುಕ್ಲಪಕ್ಷದ ಮೊದಲನೆಯ ದಿನ. ಈಗ ಬರುವ ಸಂವತ್ಸರದ ಹೆಸರು ಶ್ರೀ ವಿಳಂಬಿ ಸಂವತ್ಸರ. ಇಡೀ ಸಂವತ್ಸರಕ್ಕೆ ಅಧಿಪತಿ ಸೂರ್ಯ. ಯುಗಾದಿಯ ಋತುವಾದ ವಸಂತ ಋತುವಿನಲ್ಲಿ ನಿಸರ್ಗವೇ ಹೊಸ ಹೂ ತಳಿರುಗಳಿಂದ ತನ್ನನ್ನು ಸಿಂಗರಿಸಿಕೊಂಡು ಜಗತ್ತಿಗೆ ಹೊಸತನದ ಸಂತೋಷವನ್ನು ಸಾರುತ್ತದೆ.

ಯುಗಾದಿಯಂದು ನಾವು ಆಚರಿಸಬೇಕಾದ ಕಾರ್ಯಗಳು ಹೀಗಿವೆ:

೧)ವಿಶೇಷ ಅಭ್ಯಂಜನ ಸ್ನಾನ-ಎಂದರೆ ಪ್ರಾತಃಕಾಲದಲ್ಲಿ ಎದ್ದು ಎಣ್ಣೆ ಹಚ್ಚಿಕೊಂಡು ಮಾಡುವ ಸ್ನಾನ. ಇದರಿಂದ ದೇಹಕ್ಕೂ ಮತ್ತು ಮನಸ್ಸಿಗೂ ಒಳ್ಳೆಯದು.

೨)ಮನೆಯನ್ನು ಸಿಂಗರಿಸುವುದು. ರಂಗೋಲಿ ಇಡುವುದು, ಹೊಸ ತೋರಣ ಕಟ್ಟುವುದು. ಹೊಸ ಬಟ್ಟೆ ಉಡುವುದು.

೩)ಒಳ್ಳೆಯ ಕಾರ್ಯಗಳನ್ನು ಆರಂಭಿಸುವ ಸಂಕಲ್ಪವನ್ನು ಮಾಡುವುದು.

೪)ಮನೆಯಲ್ಲಿ ಇಷ್ಟ ದೇವತೆಯನ್ನು ಭಕ್ತಿಯಿಂದ ಪೂಜಿಸುವುದು.

೫)ಇಷ್ಟ ದೇವತೆಯನ್ನು ಉದ್ದೇಶಿಸಿ ಹೋಮ ಮಾಡುವುದು.

೬)ಪಂಚಾಂಗ ಶ್ರವಣ- ಪಂಚಾಂಗ ಎಂದರೆ ತಿಥಿ, ವಾರ, ನಕ್ಷತ್ರ, ಯೋಗ ಮತ್ತು ಕರಣಗಳ ಸೇರುವಿಕೆ. ಮನೆಯಲ್ಲಿನ ಒಬ್ಬರು ಪಂಚಾಂಗವನ್ನು ಓದಿ, ಮನೆಯ ಎಲ್ಲರ ರಾಶಿ, ನಕ್ಷತ್ರಗಳಿಗೆ ಅನುಗುಣವಾಗಿ ವರ್ಷದ ಫಲವನ್ನು ತಿಳಿಸುವುದು.

೭)ಯಥಾಶಕ್ತಿ ದಾನ ಮಾಡುವುದು. ದೇವಾಲಯಕ್ಕೆ ಹೋಗಿ ದೇವತಾ ದರ್ಶನ ಮಾಡಿ ಕಾಣಿಕೆಯನ್ನು ನೀಡಬಹುದು.

೮)ಯುಗಾದಿ ದಿನದ ವಿಶೇಷ ಪ್ರಸಾದವಾದ ಬೇವು-ಬೆಲ್ಲವನ್ನು ತಿನ್ನುವುದು. ಬೇವು-ಬೆಲ್ಲ ಜೀವನದ ಕಹಿ-ಸಿಹಿ ಮಿಶ್ರಣದ ಸಂಕೇತ. ಅದನ್ನು ತಿನ್ನುವಾಗ ಕೆಳಗಿನ ಪ್ರಾರ್ಥನೆ ಹೇಳಬೇಕು.

**"ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯ ಚ**

**ಸರ್ವಾರಿಷ್ಟ ವಿನಾಶಾಯ ನಿಂಬಕ ದಲ ಭಕ್ಷಣಮ್"**

ಅಂದರೆ "ಧೀರ್ಘವಾದ ಆರೋಗ್ಯಪೂರ್ಣ ಮತ್ತು ಸಂಪತ್ತಿನಿಂದ ಕೂಡಿದ ಹಾಗೂ ಎಲ್ಲ ಅನಿಷ್ಟಗಳನ್ನೂ ನಿವಾರಿಸುವ ಶಕ್ತಿಯನ್ನು ದೇವರು ನೀಡಲಿ" ಎಂದರ್ಥ.

(ಮುಂದಿನ ಪುಟಕ್ಕೆ...)



Copyright © KCO – Brindavana


ಕಾವ್ಯ ಕಡಮೆ ನಾಗರಕಟ್ಟೆ

**ಚಿ**ಕ್ಕಂದಿನಿಂದಲೂ ನಾನು 'ಮನೆಗೆ ಬಂದ ಹೆಣ್ಣು' ಪದ್ಯವನ್ನು ಗಾಯಕಿ ರತ್ನಮಾಲಾ ಪ್ರಕಾಶರ ದನಿಯಲ್ಲಿ ನೂರಾರು ಬಾರಿ ಕೇಳುತ್ತಲೇ ಬಂದವಳು, ಈ ಕವಿತೆಯ ಭಾವಪೂರ್ಣ ಲಯಕ್ಕೆ ಎಂಥದೇ ಸಮಯದಲ್ಲಿಯೂ ತಲೆದೂಗಬೇಕು ಅನ್ನಿಸುವುದು.

ನರಸಿಂಹಸ್ವಾಮಿಯವರು ಈ ಪದ್ಯ ಬರೆದದ್ದು ನಲವತ್ತರ ದಶಕದಲ್ಲಿ. ಅಂದರೆ ಇಂದಿನಿಂದ ಸುಮಾರು ಎಪ್ಪತ್ತು ವರುಷಗಳ ಹಿಂದೆ ಮದುವೆಯ ನಂತರದ ಮೂರು ದಿನಗಳಲ್ಲಿ ಹೆಣ್ಣು ತನ್ನ ಹೊಸಮನೆಗೆ ಹೇಗೆ ಕ್ರಮೇಣ ಹೊಂದಿಕೊಳ್ಳುತ್ತಿದ್ದಳು ಎಂಬುದನ್ನು ಹನ್ನೆರಡೇ ಸಾಲುಗಳಲ್ಲಿ ಅತಿ ಸೂಕ್ಷ್ಮವಾಗಿ ಹೇಳುವ ಈ ಪದ್ಯ ನರಸಿಂಹಸ್ವಾಮಿಯವರಿಂದ ರಚಿತವಾದ ಹಲವಾರು ಧ್ವನಿಪೂರ್ಣ ಕವನಗಳಲ್ಲಿ ಒಂದು.

ಈ ಪದ್ಯದಲ್ಲಿ ಬರುವ ಹೆಣ್ಣು ಇವತ್ತಿನ ಹೆಣ್ಣಿಗೆ ಪೂರ್ತಿ ಅಪರಿಚಿತಳಾಗಿದ್ದರೂ ಕವಿತೆಯ ಹೊರಗೆ ನಿಂತು ಅಲ್ಲಿನ ಲಯ, ರಸ, ಭಾವಗಳ ಆಸ್ವಾದಿಸಲು ನಮಗೆ ಯಾವುದೇ ತೊಡಕುಂಟಾಗುವುದಿಲ್ಲ. ಇಲ್ಲಿ ಕೆ.ಎಸ್.ನ ಅವರು ತಾವು ಅಪ್ಪಟ ಸ್ತ್ರೀ ಸಂವೇದನೆಯ ಕವಿ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸುತ್ತಾರೆ. ಇಲ್ಲಿನ ಹೆಣ್ಣನ್ನು ಅವರೇ ತುಂಬ ಹತ್ತಿರದಿಂದ ಗಮನಿಸಿದ್ದಾರೆ ಎಂಬುದು ಸ್ಪಷ್ಟವಾಗುವುದು. ಕಣ್ಣಿಗೆ ಬಟ್ಟೆ ಕಟ್ಟಿ ಕಾಡಿಗೆ ಬಿಟ್ಟಂತೆ ನಡೆಯುತ್ತಿದ್ದ ಆಗಿನ ಕಾಲದ ಮದುವೆಗಳಲ್ಲಿ ಹೆಣ್ಣು ಮೊದಲ ಬಾರಿಗೆ ತನ್ನ ಮನೆ ಬಿಟ್ಟು ಗಂಡನ ಮನೆಗೆ ಪೂರ್ತಿಯಾಗಿ ತನ್ನನ್ನು ಅರ್ಪಿಸಿಕೊಳ್ಳುವ ಕ್ರಮದಲ್ಲಿ ಹೇಗೆ ಮಾಲೆಯಿಂದ ಬಿಡಿಸಿಟ್ಟ ಬಿಡಿಹೂವಿನಂತಾಗುತ್ತಿದ್ದಳು ಎಂಬುದನ್ನು ಕವಿ ಚಿತ್ರದಲ್ಲಿ ಕಟ್ಟಿಕೊಡುತ್ತಾರೆ.



ಈ ಪದ್ಯದಲ್ಲಿ ಬರುವ 'ಚಿಂತೆ, ಬಿಡಿಹೂವ ಮುಡಿದಂತೆ' ಸಾಲು ತುಂಬ ವಿಶೇಷವಾದುದು. 'ಚಿಂತೆ-ಬಿಡಿ-ಹೂವ-ಮುಡಿದಂತೆ' ಈ ನಾಲ್ಕು ಶಬ್ದಗಳನ್ನು ಬಿಡಿ ಪದಗಳಾಗಿಯೂ ತಿರುವು-ಮುರುವಾಗಿಯೂ ಹತ್ತಾರು ಬಾರಿ ಒಡೆದು ಕಟ್ಟಬಹುದು. ಪ್ರತೀ ಸಲ ಹಾಗೆ ಮಾಡಿದಾಗಲೂ ಅದು ಹೊಸ ಅರ್ಥವನ್ನು ಸ್ಫುರಿಸುತ್ತದೆ. ಮದುವೆಯಾಗಿ ತನ್ನ ಗಂಡನ ಮನೆಗೆ ಮೊದಲ ಬಾರಿ ಬಂದ ಹೆಣ್ಣಿಗೆ, ತಲೆಯಲ್ಲಿ ಬಿಡಿಹೂವು ಮುಡಿದಂತೆ ಮನದಲ್ಲಿ ಕಸಿವಿಸಿಯಿತ್ತು ಎಂಬುದು ಕವಿಯೇ ಈ ಸಂದರ್ಭದಲ್ಲಿ ಕೊಟ್ಟ ಅರ್ಥ. ಇದಕ್ಕೆ ಹೊರತಾಗಿಯೂ ಆ ಸಾಲನ್ನು 'ಚಿಂತೆಯನ್ನು ಅದರಷ್ಟಕ್ಕೇ ಬಿಟ್ಟುಬಿಡಿ, ಹೂವು ಮುಡಿದಂತೆ' ಅಂತಲೂ ಅರ್ಥೈಸಿಕೊಳ್ಳಬಹುದು. ಚಿಂತೆ ಎನ್ನುವುದೇ ಹೂವು ಮುಡಿದಷ್ಟು ನಾಜೂಕಿನ ವಿಷಯ. ಬಿಡಿಹೂವ ಎರಡೇ ಬೆರಳುಗಳಲ್ಲಿ ಮೃದುವಾಗಿ ಹಿಡಿದು ನಾಲ್ಕಾರು ಕೂದಲ ಮಧ್ಯೆ ಸಿಕ್ಕಿಸಿಕೊಂಡ ಹಾಗೆ, ಆ ಹೂವು ಮುಡಿಯಲ್ಲಿದೆ ಎಂಬಷ್ಟೇ ಕಾಲ ಚಿಂತೆಯೂ ಮನಸ್ಸಿನಲ್ಲಿರುತ್ತದೆ ಎಂಬ ಅರ್ಥವೂ ಬರುತ್ತದೆ. ಹೂವು ಮುಡಿದರೆ ಚಿಂತೆಯನ್ನೇ ಮುಡಿದಂತೆ, ಚಿಂತೆ ಎನ್ನುವುದೇ ಒಂದು ಬಿಡಿಹೂವು ಇದ್ದಂತೆ- ಮುಂತಾಗಿ ಈ ಒಂದೇ ಸಾಲಿಗೆ ಎಷ್ಟು ಅರ್ಥಗಳನ್ನು ಬೇಕಾದರೂ ಕಲ್ಪಿಸಿಕೊಳ್ಳಬಹುದಾಗಿದೆ. ಆ ಕಾರಣಕ್ಕೆ ಈ ಒಂದು ಸಾಲು ಕವಿತೆಯಿಂದಾಚೆಗೆ ಜಿಗಿದು ತಾನೇ ಇನ್ನೊಂದು ಬಿಡಿ ಕವಿತೆಯಾಗುತ್ತದೆ. ಅಂಥದೇ ಮಹತ್ವವಿರುವ ಕವನದೊಳಗಿನ ಇನ್ನೊಂದು ಸಾಲು 'ಜೀವದಲಿ ಜಾತ್ರೆ ಮುಗಿದಂತೆ' ಎಂಬುದು. ಮೊದಲ ಓದಿಗೆ ಇದು ಆ ಹೆಣ್ಣಿನ ಜೀವದಲ್ಲಿ ಮದುವೆ ಎಂಬ ಸಂಭ್ರಮದ ದೆಸೆಯಿಂದ ರೂಪಗೊಂಡಿದ್ದ ಜಾತ್ರೆ ಇನ್ನು ಮುಗಿದಂತೆ ಎಂಬ ಅರ್ಥ ಬರುತ್ತದೆ. ಆದರೆ 'ಜೀವದಲಿ ಜಾತ್ರೆ ಮುಗಿದಂತೆ' ಸಾಲನ್ನು ನಾವು ಯಾವ ಸಂದರ್ಭಕ್ಕೆ ಬೇಕಾದರೂ ತಳುಕು ಹಾಕಿಕೊಳ್ಳಬಹುದು. ನನಗಂತೂ ಚಿಕ್ಕದಿರಲಿ ದೊಡ್ಡದಿರಲಿ, ಯಾವುದೇ ಸಂಭ್ರಮ, ಮತ್ತು ಆ ನಿಟ್ಟಿನಲ್ಲಿ ಉಂಟಾದ ಗಡಿಬಿಡಿ, ಅದರೊಟ್ಟಿಗೆ ಬರುವ ಖುಷಿ ಎಲ್ಲ ಮುಗಿದಾಗ ಜೀವದಲಿ ಜಾತ್ರೆ ಮುಗಿದಂತೆ ಎಂದು ತಾತ್ಕಾಲಿಕವಾಗಿಯಾದರೂ ಒಂದು ಕ್ಷಣ ಅನ್ನಿಸುತ್ತದೆ. ಅಂತೆಯೇ ಚುನಾವಣೆ ಮುಗಿದ ನಂತರ ಯಾವುದೇ ಜನಪ್ರತಿನಿಧಿಗೂ ಆ ಕ್ಷಣಕ್ಕೆ ಈ ಸಾಲು ತನಗೆಂದೇ ಬರೆದದ್ದು ಎಂದು ಅನ್ನಿಸದೇ ಇರದು. ಅದೇ ರೀತಿ ತನ್ನ ಬದುಕಿನ ಮಹತ್ತರ ಪರೀಕ್ಷೆಯೊಂದನ್ನು ಎದುರಿಸಿ ಬಂದ ವಿದ್ಯಾರ್ಥಿಗೆ, ಅಥವಾ ಅತ್ಯಂತ ಹುರುಪಿನಿಂದ ಕಡ್ಡಿ-ಕಡ್ಡಿ ಕೂಡಿಹಾಕಿ ತನ್ನ ಗೂಡು ಕಟ್ಟಿ ಮುಗಿಸಿದ ಹಕ್ಕಿಗೂ ಈ ಸಾಲನ್ನು ಅನ್ವಯಿಸಬಹುದು. ಮಹತ್ವಾಕಾಂಕ್ಷೆಯಿಂದ ತಯಾರಾದ ಯಾವುದೇ ಕಾರ್ಯದ ಕೊನೆಗೆ ಈ ಸಾಲು ತನ್ನ ಡೇರೆ ಹಾಕಿಕೊಂಡು ಕುಳಿತಿರುತ್ತದೆ ಎಂಬುದೇ ನನ್ನ ನಂಬಿಕೆ.

ಇನ್ನು ಎರಡನೆಯ ಮತ್ತು ಮೂರನೆಯ ಸ್ಟ್ಯಾಂಜಾಗಳಲ್ಲಿ ಕವಿ 'ಹರಿದಂತೆ' ಎಂಬ ಪದಕ್ಕೆ ಎರಡು ಬೇರೆಬೇರೆ ರೂಪಕಗಳನ್ನು ಕೊಟ್ಟಿದ್ದು ಗಮನಿಸಬಹುದು. ಪದ್ಯದಲ್ಲಿ ಬರುವ ಹಗಲು-ಸಂಜೆ-ರಾತ್ರಿಗಳು ಒಂದು ದಿನದಲ್ಲಿ ಬರುವ ಮೂರು ಹೊತ್ತುಗಳು ಮಾತ್ರ ಆಗಿರದೇ ಬದುಕಿನ ಮೂರು ಕಾಲಗಳಾಗಿಯೂ ನಮ್ಮ ಗ್ರಹಿಕೆಗೆ ಬರುತ್ತವೆ. ಈ ಪದ್ಯದಲ್ಲಿ ಬರುವ ಹೆಣ್ಣನ್ನು ಬದಿಗಿಟ್ಟು ನೋಡಿದರೆ, ಹಗಲು-ಸಂಜೆ-ರಾತ್ರಿಗಳೆಂಬ ಈ ಮೂರು ಕಾಲಗಳು ಮನುಷ್ಯನ ಬದುಕಿನ ಮೂರು ಕಾಲಘಟ್ಟಗಳೇ ಆಗಿವೆ. ಅವು ಅವನನ್ನು ಮಾಗಿಸುತ್ತ ಕೊನೆಯಲ್ಲಿ ಯಾವುದೇ ಆರೋಪವಿಲ್ಲದೇ ಹೇಗೆ ಬದುಕನ್ನು ಒಪ್ಪಿಕೊಳ್ಳುವಂತೆ ರೂಪಿಸುತ್ತದೆ ಎಂಬ ಕುರಿತೇ ಕವಿ ಇಲ್ಲಿ ಮಾತನಾಡುತ್ತಿದ್ದಾರೇನೋ ಅಂತನ್ನಿಸುವುದು.

ಇನ್ನು ಕವಿತೆಯ ಮೊದಲ ಎರಡು ಸಾಲುಗಳಲ್ಲಿ ಬರುವ ಬಿಡಿ ಹೂವಿನ ವಿಶ್ಲೇಷಣೆ ಕೊನೆಯ ಸಾಲುಗಳಲ್ಲಿ 'ದಂಡೆ ಹೂ' ಆಗಿ ಮಾರ್ಪಾಟಾಗಿರುವುದು ಇಲ್ಲಿ ಬರುವ ಹೆಣ್ಣಿನ ಮನಸ್ಥಿತಿಗೆ ಹಿಡಿದ ದರ್ಪಣವಾಗಿದೆ.

●

(..ಹಿಂದಿನ ಪುಟದಿಂದ)

**ಸಾರಾಂಶ**

ಒಟ್ಟಿನಲ್ಲಿ ಸನಾತನ ಧರ್ಮದ ದೃಷ್ಟಿಯಿಂದ ನಮ್ಮ ಜೀವನವನ್ನು ಸಂತೋಷದಿಂದ ಅನುಭವಿಸುತ್ತಾ, ಜೊತೆಗೆ ನಾಲ್ಕು ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷಗಳನ್ನು ಸಾಧಿಸಬೇಕು. ಇದನ್ನು ಸಾಧಿಸಬೇಕಾದರೆ ಯುಗಾದಿಯಿಂದ ಪ್ರಾರಂಭವಾಗಿ ವರ್ಷದಲ್ಲಿ ಬರುವ ಎಲ್ಲ ಹಬ್ಬಗಳನ್ನೂ ಶ್ರದ್ಧೆಯಿಂದ ಆಚರಿಸಬೇಕು. ಪ್ರತಿಯೊಂದು ಹಬ್ಬಕ್ಕೂ ಆಧ್ಯಾತ್ಮಿಕ, ತಾತ್ವಿಕ, ಸಾಂಪ್ರದಾಯಿಕ ಹಾಗೂ ಸಾಂಸ್ಕೃತಿಕ ಆಯಾಮಗಳಿವೆ ಎಂಬುದನ್ನು ಮನಗಂಡೆವು. ಹಬ್ಬ-ಹರಿದಿನಗಳು ಕೇವಲ ಭೋಗದಲ್ಲಿ ಮುಗಿಯದೆ ನಮ್ಮ ಯೋಗ ಸಾಧನೆಯ ಪ್ರಗತಿಯಾಗಬೇಕು. ಆ ರೀತಿ ಆಗಬೇಕಾದರೆ ಹಬ್ಬ-ಹರಿದಿನಗಳನ್ನು ಆಳವಾಗಿ ಅಧ್ಯಯನ ಮಾಡಿ, ಅವುಗಳ ಮಹತ್ವವನ್ನು ಅರಿತು ಆಚರಿಸಬೇಕು. ಪ್ರತಿ ವರ್ಷವೂ ಅನೇಕ ಹಬ್ಬ-ಹರಿದಿನಗಳು ಬರುವುದರಿಂದ, ಅವುಗಳ ಅಧ್ಯಯನ ಮತ್ತು ಆಚರಣೆಯಿಂದ ನಮಗೆ ಬಹಳ ಆನಂದ ಮತ್ತು ಶಾಂತಿ ದೊರಕುವುದು ಖಂಡಿತ. ಹಬ್ಬಗಳ ಆಳವಾದ ಅಧ್ಯಯನಕ್ಕೆ ಸಹಕಾರಿಯಾದ, ಮಹಾ ಯೋಗಿಗಳೂ ಮತ್ತು ಜ್ಞಾನಿಗಳೂ ಆದ ಶ್ರೀ ಶ್ರೀರಂಗಪ್ರಿಯ ಸ್ವಾಮಿಗಳು ಬರೆದ "ಭಾರತೀಯರ ಹಬ್ಬ-ಹರಿದಿನಗಳು" ಎಂಬ ಉದ್ಗ್ರಂಥ ಉಚಿತವಾಗಿ ಸಿಗುತ್ತದೆ. ಈ ಉಚಿತ ಪುಸ್ತಕವನ್ನು www.ayvm.in ಎಂಬ ವೆಬ್ ಸೈಟ್ ನಿಂದ ಎಲ್ಲರೂ ಪಡೆದುಕೊಳ್ಳಬಹುದು. ●


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

*"ಒಲುಮೆಯಿಂದ ಒಲುಮೆಗೆ"*

# ನಿನ್ನೊಲುಮೆಯಿಂದಲೇ



ಸರಿತ ನವಲಿ

**ಮೂ**ಡಣದಲ್ಲಿ ಸೂರ್ಯ ಹುಟ್ಟುತ್ತಿದ್ದ ಸಮಯ, ಆಗಸದಲ್ಲೆಲ್ಲ ಬಂಗಾರದ ಕಿರಣಗಳು ಮೂಡಿದ್ದವು. ಗಿಡಮರಗಳಿಂದ ಹಕ್ಕಿಗಳ ಚಿಲಿಪಿಲಿ, ಕಿಚಪಿಚ ಕಲರವ ಕೇಳಿಬಂದು, ದೂರದಲ್ಲೆಲ್ಲೋ ಹುಂಜವೊಂದು "ಕೊ..ಕೊ..ಕೊ..ಕ್ಕೋ" ಎಂದು ಕೂಗಿ ಬೆಳಗಾಯಿತೆಂದು ಹೇಳುತ್ತಿತ್ತು. ಕೊಟ್ಟಿಗೆಯಲ್ಲಿದ್ದ ಹಸುಗಳು ಕುತ್ತಿಗೆ ಅಲ್ಲಾಡಿಸಿದಂತೆಲ್ಲಾ ಕಿರುಗಂಟೆಯ ದನಿ ಕೇಳಿಬರುತ್ತಿತ್ತು. ಬಾವಿಯ ರಾಟೆಯ ಗರ, ಗರ ಸದ್ದಿನೊಂದಿಗೆ ನೀರು ಸೇದಿ ಬಚ್ಚಲು ಮನೆಯ ಹಂಡೆ ತುಂಬಿಸಿ, ನೀರು ಕಾಯಿಸಲು ಒಲೆ ಉರಿಗೆ ಹೊಟ್ಟು, ತೆಂಗಿನ ಮಟ್ಟೆ ಹಾಕಿದ ಸಾವಿತ್ರಮ್ಮ, ಅಂಗಳ ಗುಡಿಸಿ-ಸಾರಿಸಿ ರಂಗೋಲಿ ಹಾಕತೊಡಗಿದರು. ಪಡಸಾಲೆಯಲ್ಲಿದ್ದ ಗೋಡೆ ಗಡಿಯಾರ ಢಣ್, ಢಣ್ ಎಂದು ಆರು ಸಲ ಬಾರಿಸಿದಾಗ ನಿದ್ದೆಯಿಂದ ಎಚ್ಚರಗೊಂಡು, ಕಣ್ಣುಬಿಟ್ಟ ಕೂಡಲೇ ಆ ದಿನ ಕಾಲೇಜಿನ ಮೊದಲ ದಿನವೆಂದು ಮತ್ತೆ ನೆನಪಾಗಿ, ದಡಬಡಿಸಿ ಹಾಸಿಗೆಯಿಂದ ಎದ್ದು ಹಿತ್ತಲಿಗೆ ಓಡಿದ್ದ ವಸಂತ.

ತನ್ನ ಹಳ್ಳಿಯಾದ ಚಿಕ್ಕಳ್ಳಿಯ ಶಾಲೆಯಲ್ಲಿ ಹತ್ತನೇ ತರಗತಿಯವರೆಗೆ ಓದಿ ಒಳ್ಳೆಯ ಅಂಕ ಗಳಿಸಿದ್ದ ವಸಂತ, ಪಿ.ಯು.ಸಿ. ಓದಲು ಹತ್ತಿರದ ಮೈಸೂರಿನ ಕಾಲೇಜಿಗೆ ಸೇರಿದ್ದ. ಚಿಕ್ಕಳ್ಳಿಗೆ ಮೈಸೂರಿನಿಂದ ಖಾಸಗಿ ಬಸ್ಸು 'ಕಾವೇರಿ', ಬೆಳಿಗ್ಗೆ, ಮಧ್ಯಾಹ್ನ, ಸಂಜೆಗೊಮ್ಮೆಯಂತೆ ದಿನಕ್ಕೆ ಮೂರು ಟ್ರಿಪ್ ಬಂದು ಹೋಗುತ್ತಿತ್ತು. ಬೆಳಿಗ್ಗೆ 7:30ಕ್ಕೆ ಚಿಕ್ಕಳ್ಳಿಯಿಂದ ಹೊರಟು, ದಾರಿಯಲ್ಲಿ ಸಿಗುವ ಎಲ್ಲ ಪುಟ್ಟ ಹಳ್ಳಿಗಳಲ್ಲಿ, ಅಡ್ಡರಸ್ತೆಗಳಲ್ಲಿ ನಿಲ್ಲಿಸುತ್ತ ಮತ್ತು ರಸ್ತೆಯಲ್ಲಿ 'ಕೈ' ತೋರಿಸಿದವರೆನ್ನೆಲ್ಲ ಹತ್ತಿಸಿಕೊಂಡು ಮೈಸೂರು ತಲುಪಲು ಒಂದೂವರೆ ಗಂಟೆ ತೆಗೆದುಕೊಳ್ಳುತ್ತಿತ್ತು. ಅಂದು ಬೆಳಿಗ್ಗೆಯ 'ಕಾವೇರಿ'ಯನ್ನು ಹಿಡಿಯುವ ಅವಸರದಲ್ಲಿದ್ದ ವಸಂತ. ಬೆಳಿಗ್ಗೆ ಬೇಗನೆ ಎದ್ದು ಕಾಲೇಜಿಗೆ ಹೋಗುವ ತಯಾರಿಯಲ್ಲಿದ್ದ ಮಗನನ್ನು ನೋಡಿದ ಸಾವಿತ್ರಮ್ಮ, ದೇವರಮನೆಯ ತಮ್ಮ ಕೆಲಸವನ್ನು ಮೊಟಕುಗೊಳಿಸಿ, ವಸಂತನಿಗೆ ಬೆಳಗಿನ ತಿಂಡಿ ತಯಾರಿಸಿ, ಮಧ್ಯಾಹ್ನದ ಊಟಕ್ಕೆ ಡಬ್ಬಿ ಕಟ್ಟಬೇಕೆಂದು ಅಡುಗೆಮನೆ ಸೇರಿದರು. ಸ್ನಾನ ಮುಗಿಸಿಬಂದ ವಸಂತನಿಗೆ ಸಂಧ್ಯಾವಂದನೆ ಮಾಡಲು ಒತ್ತಾಯಿಸಿ, ತೆಂಗಿನಕಾಯಿ ತುರಿಯಲು ತೊಡಗಿದರು ಸಾವಿತ್ರಮ್ಮ. ಅಮ್ಮ ಹಾಕಿಕೊಟ್ಟ ದೋಸೆ-ಚಟ್ನಿ ತಿಂದು, ಚಿತ್ರಾನ್ನ-ಮೊಸರನ್ನವನ್ನು ಡಬ್ಬಿಯಲ್ಲಿ ಹಾಕಿಕೊಂಡ ವಸಂತ, ಅಪ್ಪನೊಂದಿಗೆ ಮೈಸೂರಿಗೆ ಹೋಗಿ ಬಟ್ಟೆ ಖರೀದಿಸಿ, ಹೊಲಿಸಿ ತಂದಿದ್ದ ಹೊಸ ಪ್ಯಾಂಟ್, ಶರ್ಟ ತೊಟ್ಟುಕೊಂಡು ಬರುವಷ್ಟರಲ್ಲೇ ಅಪ್ಪ ಶ್ಯಾಮರಾಯರು ದೇವರಮನೆಯಲ್ಲಿ ಪೂಜೆಗೆ ಅಣಿಮಾಡಿಕೊಳ್ಳುತ್ತಿದ್ದರು. ದೇವರ ಫೋಟೋಗೆ ನಮಸ್ಕರಿಸಿ, ಅಪ್ಪ-ಅಮ್ಮನಿಂದ ಆಶೀರ್ವಾದ ಪಡೆದು, ಬಸ್ ನಿಲ್ದಾಣದತ್ತ ಅದೇನೋ ಉತ್ಸಾಹದಿಂದ ಕಾಲೇಜಿನ ಬಗ್ಗೆ ಯೋಚಿಸುತ್ತ ಹೆಜ್ಜೆ ಹಾಕುತ್ತಿದ್ದ ವಸಂತನನ್ನು, ದೂರದಿಂದಲೇ "ಘಾಂ..ಘ ಘ ಘ ಘಾಂ, ಘ ಘ ಘ ಘಾಂ" ಎನ್ನುವ ಸದ್ದಿನೊಂದಿಗೆ 'ಕಾವೇರಿ'ಯ ಹಾರ್ನ್ ಎಚ್ಚರಿಸಿತ್ತು.



ಚಿತ್ರ ಕೃಪೆ : ಅಂತರ್ಜಾಲ

* * * *

ನಿದ್ದೆಯಿಂದ ಎಚ್ಚರಗೊಂಡ ವಸಂತ ಒಂದೇ ಸಮನೆ ಹೊಡೆದುಕೊಳ್ಳುತ್ತಿದ್ದ ಮೊಬೈಲ್ ಫೋನಿನ ಅಲಾರಂ ನಿಲ್ಲಿಸಿದ. ಇದು ಅನುಭವವೊ, ಕನಸೊ ಎಂದು ಯೋಚಿಸುತ್ತಿರುವಾಗಲೇ ವಸಂತನ ಮನದ ಪುಟಗಳಲ್ಲಿ ಕೆ.ಎಸ್.ನರಸಿಂಹಸ್ವಾಮಿಯವರ ಕವನವೊಂದರ ಸಾಲುಗಳು ಮೂಡಿದ್ದವು.

"ಕಂಡ ಕನಸುಗಳಾಚೆಗೆಲ್ಲೊ ಕೋಗಿಲೆ ಕೂಗಿ, ಕೆರೆಯೆಲ್ಲ ಕೆಂಪಾಗಿ ಬೆಳಗಾಯಿತು." ಹೊಸದಿನವೊಂದು ಹುಟ್ಟಿ, ತೊಟ್ಟಿಲಲ್ಲಿ ಜೀಕಿ, ಅಂಬೆಗಾಲಿಡುತ್ತ ತೆವಳಿ, ಪುಟ್ಟ ಹೆಜ್ಜೆಗಳನ್ನಿಡುತ್ತ ಬದುಕಿನ ಓಟದೊಂದಿಗೆ ತನ್ನನ್ನು ಜೊತೆಯಾಗಿಸಿಕೊಳ್ಳುವ ತಯಾರಿಯಲ್ಲಿತ್ತು. ವಸಂತನ ಮನಸ್ಸಿನಲ್ಲಿ ಅದೇನೋ ಉತ್ಸಾಹ, ಉದ್ವೇಗ ಮನೆ ಮಾಡಿತ್ತು. ಮನದ ಭಾವನೆಗಳಿಗೆ ಭಾಷೆಯೊಂದ ನೀಡುವಂತೆ ತನ್ನ ನೆಚ್ಚಿನ 'ಮೈಸೂರು ಮಲ್ಲಿಗೆ'ಯ ಕವಿಯ ಸಾಲುಗಳನ್ನು ಗುನುಗುನಿಸಿದ್ದ ವಸಂತ. "ಎಲ್ಲಿ ಹೂವರಳಿ ಮಾತನಾಡುವುದೊ, ಎಲ್ಲಿ ಹಕ್ಕಿ ಹಾಡಾಗಿ ಮುಗಿಯುವುದೊ,ಎಲ್ಲಿ ಚೆಲುವು ಒಲವಾಗಿ ಫಲಿಸುವುದೊ, ಹೊಳೆಯ ನೀರು ಥಳಥಳಿಸಿ ಹೊಳೆಯುವುದೊ, - ಹೋಗಬೇಕು ನಾನಲ್ಲಿಗೆ!" ಅಂದಹಾಗೆ ಈ ವಸಂತ ಹೊರಟಿದ್ದೆಲ್ಲಿಗೆ? ನ್ಯೂ ಯಾರ್ಕಿನಿಂದ ಮೈಸೂರಿಗೆ.

ತನ್ನ ಹಳ್ಳಿಯಲ್ಲಿ ಶಾಲಾ ವಿದ್ಯಾಭ್ಯಾಸ ಮುಗಿಸಿ, ಮುಂದಿನ ಎರಡು ವರ್ಷ ಮೈಸೂರಿನ ಕಾಲೇಜಿನಲ್ಲಿ ಓದಿದ ನಂತರ ಐ.ಐ.ಟಿ. ಖರಗಪುರದಲ್ಲಿ ಇಂಜಿನಿಯರಿಂಗ್ ಮುಗಿಸಿ ವಿದೇಶದ ಹಾದಿ ಹಿಡಿದಿದ್ದ ವಸಂತ. ಕಳೆದ ಇಪ್ಪತ್ತೂರು ವರ್ಷಗಳಿಂದ ಅಮೆರಿಕಾದಲ್ಲಿ ನೆಲೆಸಿದ್ದ ಈ ವಸಂತ ಈ ದಿನ ತಾನು ಕಾಲೇಜು ಕಲಿತ ಮೈಸೂರಿಗೆ ಹೊರಟಿದ್ದ! ಇತ್ತೀಚೆಗೆ ಫೇಸ್ ಬುಕ್, ವಾಟ್ಸ್ಯಾಪ್ ಗಳಿಂದ ಮತ್ತೆ ಸಂಪರ್ಕಕ್ಕೆ ಸಿಕ್ಕಿದ ಹಳೆ ಸ್ನೇಹಿತರು ಮುಂದಿನವಾರ ಮೈಸೂರಿನಲ್ಲಿ 'ಸ್ನೇಹ ಸಮಾಗಮ'ವನ್ನು ಏರ್ಪಡಿಸಿದ್ದರು. ಮೊದಲ ದಿನ ಕಾಲೇಜಿಗೆ ಹೋಗುವಾಗ ಮನಸ್ಸಿನಲ್ಲಿದ್ದ ಅದೇ ಉತ್ಸಾಹ, ಉದ್ವೇಗ ಇಂದೂ ವಸಂತನಲ್ಲಿತ್ತು. ಅವನ ಪ್ರತಿ ಕೆಲಸದಲ್ಲೂ ಚುರುಕುತನವಿತ್ತು. ಬೇಗ, ಬೇಗನೆ ಎಲ್ಲ ಕೆಲಸಗಳನ್ನು ಮಾಡಿ ಮುಗಿಸಿದ್ದ. ಸ್ನೇಹಿತರಿಗೆ ಕೊಡಲೆಂದು ಖರೀದಿಸಿ, ಸೂಟಕೇಸಿನಲ್ಲಿ ನಾಜೂಕಾಗಿ ಜೋಡಿಸಿಕೊಂಡ ಉಡುಗೊರೆಗಳನ್ನೆಲ್ಲ ಮತ್ತೆ, ಮತ್ತೆ ನೋಡಿಕೊಂಡಿದ್ದ. ಏರ್ ಪೋರ್ಟ್ ತಲುಪಿ, ಸೂಟಕೇಸುಗಳನ್ನು ಚೆಕ್ ಇನ್ ಮಾಡಿ, ಬೋರ್ಡಿಂಗ್ ಪಾಸ್ ಪಡೆದು, ಸೆಕ್ಯುರಿಟಿ ಚೆಕ್ ಮುಗಿಸಿಕೊಂಡು ವಿಮಾನವೇರಲು ತಯಾರಾಗಿ ಕುಳಿತವನ ನಿರೀಕ್ಷೆ ಕವಿವಾಣಿಯಂತೆ ಕಂಡಿತ್ತು. "ಹಗಲಿನಬ್ಬರ ತಣ್ಣಗಾಯಿತು, ಸಂಜೆರಂಜಿಸಿ ತೆರಳಿತು. ತುಂಬುತಾರೆಯ ಗಗನ ಮೆರೆಯಿತು, ಚಂದ್ರಲೋಕವೆ ತೆರೆಯಿತು." ವಿಮಾನವೇರಿ ತನ್ನ ಸೀಟಿನಲ್ಲಿ ಕುಳಿತ ವಸಂತನ ಯೋಚನೆಗಳಲ್ಲಿ ಈಗ ಮೈಸೂರು ಆವರಿಸಿತ್ತು. ಏರ್ ಹೋಸ್ಟೆಸ್ ತಂದಿತ್ತ ಊಟ ಮುಗಿಸಿ, ಬ್ಲ್ಯಾಂಕೆಟ್ ಹೊದ್ದು, ಹಿಂದಕ್ಕೆ ಆನಿಸಿಕೊಂಡ ಸೀಟಿಗೊರಗಿ ಕಣ್ಣುಮುಚ್ಚಿಕೊಂಡು ನಿದ್ದೆಗೆ ಜಾರಿದ ವಸಂತನ ಕಿವಿಯಲ್ಲಿ ಯಾರೋ ಈ ಸಾಲುಗಳನ್ನು ಪಿಸುಗುಟ್ಟಿದಂತಾಯ್ತು. "ನನ್ನ ಅನುಭವವೆಲ್ಲ ಕನಸಾಗಿ ಬರುತಿಹವು ಹೆದ್ದಾರಿಯಂಚಿನಲಿ ಊರ ತನಕ".

* * * *

ಚಿಕ್ಕಂದಿನಿಂದಲೂ ವಸಂತ ಬಹಳ ಬುದ್ಧಿವಂತ. ಹೈಸ್ಕೂಲಿನಲ್ಲಿ ಕನ್ನಡ ಮೇಷ್ಟ್ರಾಗಿದ್ದ ಶ್ಯಾಮರಾಯರ ಶಿಸ್ತಿನ ಮಗನಾಗಿ ಮತ್ತು ಸಂಪ್ರದಾಯಸ್ಥ ಗೃಹಿಣಿ ಸಾವಿತ್ರಮ್ಮನವರ ಮುದ್ದಿನ ಮಗನಾಗಿ ಬೆಳೆದಿದ್ದ ಇವನು, ಪುಟ್ಟ ತಮ್ಮನಾದ ಸುಮಂತನಿಗೆ ಪ್ರೀತಿಯ ಅಣ್ಣನಾಗಿದ್ದ. ಶಾಲಾ ದಿನಗಳಿಂದಲೇ ಕನ್ನಡ ಸಾಹಿತ್ಯದ ಅಭಿರುಚಿಯನ್ನು ಬೆಳೆಸಿಕೊಂಡಿದ್ದ ವಸಂತ, ಅಪ್ಪನ ಮಾರ್ಗದರ್ಶನದಲ್ಲಿ ಸಾಹಿತ್ಯದ ಆಳವನ್ನೂ ಅರಿಯುವ ಪ್ರಯತ್ನ ಮಾಡಿದ್ದ. ರಜಾದಿನಗಳಲ್ಲಿ ಅಪ್ಪ ಹೇಳುತ್ತಿದ್ದ ಕವನಗಳನ್ನೆಲ್ಲ ಓದಿ, ಶಾಲೆ, ಕಾಲೇಜುಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಆ ಕವನಗಳ ಸಾಲುಗಳನ್ನು ಹೇಳಿ ಸ್ನೇಹಿತರನ್ನೆಲ್ಲ ರಂಜಿಸುತ್ತಿದ್ದನಲ್ಲದೇ, ಅವರೆಲ್ಲ ತನ್ನನ್ನು 'ಕವಿ ಮಹಾಶಯ' ಎಂದು ಕರೆದಾಗ ಸಂತೋಷಗೊಳ್ಳುತ್ತಿದ್ದ.


Copyright © KCO – Brindavana

ಸಂಚಿಕೆ
೧೫
ಮಾರ್ಚ್, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

*"ಒಲುಮೆಯಿಂದ ಒಲುಮೆಗೆ"*

## ನಿನ್ನೊಲುಮೆಯಿಂದಲೇ

ಅಮೇರಿಕಾದಲ್ಲಿನ ಈಗಿನ ಬದುಕಿಗೆ ಈ ಕವನಗಳೂ ಜೊತೆಯಾಗಿದ್ದವು. ಮನೆಯಲ್ಲಿ, ಆಫೀಸಿನಲ್ಲಿ, ಬದುಕಿನ ಸಂದರ್ಭಕ್ಕೆ ತಕ್ಕಂತೆ ಕವನದ ಸಾಲುಗಳನ್ನು ತನಗೆ ತಾನೇ ಹೇಳಿಕೊಳ್ಳುತ್ತಿದ್ದ. ಹತ್ತನೇ ಕ್ಲಾಸ್ ಮುಗಿಸಿ, ಮುಂದೆ ಕಾಲೇಜಿಗೆಂದು ಮೈಸೂರಿಗೆ ಹೋಗಿ ಓದುವ ನಿರ್ಧಾರ ಮಾಡಿದ್ದ ವಸಂತನಿಗೆ, ಆ ವರ್ಷದ ಬೇಸಿಗೆ ರಜೆಯಲ್ಲಿ ಶ್ಯಾಮರಾಯರು ತಮ್ಮ ಸಂಗ್ರಹದಲ್ಲಿದ್ದ 'ಮೈಸೂರು ಮಲ್ಲಿಗೆ'ಯ ಕವಿ ಕೆ.ಎಸ್.ನರಸಿಂಹಸ್ವಾಮಿಯವರ ಕವನಗಳ ಕೆಲವು ಪುಸ್ತಕಗಳನ್ನು ಓದಲು ಕೊಟ್ಟಿದ್ದರು. ಕವನಗಳಲ್ಲಿನ ಸರಳತೆ, ಜೀವನಕ್ಕೆ ಹತ್ತಿರವಾಗುವಂಥ ಶೈಲಿ, ಕವಿ ಹೇಳಿದ ಪ್ರೀತಿ, ಪ್ರೇಮ, ಒಲವು ಯುವ ವಸಂತನನ್ನು ಮೆಚ್ಚಿಸಿದ್ದವು. ಪಿ.ಯು.ಸಿ.ಯಲ್ಲಿ ವಿಜ್ಞಾನದ ವಿಷಯಗಳನ್ನು ಓದುತ್ತಿದ್ದ ವಸಂತನ ಮನದಲ್ಲಿ ಈ ಕವನಗಳು ಮಲ್ಲಿಗೆಯ ಕಂಪನ್ನು ಬೀರುತ್ತಾ ಸಾಗಿದ್ದವು.

* * * *

ಹಿಂದಿನ ಸೀಟಿನಲ್ಲಿ ಕುಳಿತಿದ್ದ ಪುಟ್ಟ ಮಕ್ಕಳಿಬ್ಬರ ಗಲಾಟೆಯಿಂದ ವಸಂತನ ಕನಸಿಗೆ ಬ್ರೇಕ್ ಬಿದ್ದಿತು. ಹಿಂದೆ ತಿರುಗಿ ನೋಡಿದಾಗ ಮಕ್ಕಳಿಬ್ಬರಿಗೂ ಅವರಮ್ಮ ಊಟ ಮಾಡಿಸುವ ಪ್ರಯತ್ನದಲ್ಲಿದ್ದುದು ಕಂಡಿತ್ತು. ವಿಮಾನದಲ್ಲಿ ಕೊಡುವ ಊಟ ದೊಡ್ಡವರಿಗೇ ರುಚಿಸುವುದಿಲ್ಲ, ಇನ್ನು ಈ ಮಕ್ಕಳೆಲ್ಲಿ ತಿನ್ನಬೇಕು? ಚಾಕಲೇಟ್ ತಿನ್ನುತ್ತೇವೆಂದು ಹಟಮಾಡುತ್ತಿದ್ದರು. ಥಕ್ಕನೇ ವಸಂತನಿಗೆ ತನ್ನ ಕ್ಲಾಸಿನಲ್ಲಿ ಹಿಂದಿನ ಬೆಂಚಿನಲ್ಲಿ ಕುಳಿತುಕೊಳ್ಳುತ್ತಿದ್ದ ಕಿಟ್ಟಿ, ಸೀನ ಮತ್ತು ರಾಘು ನೆನಪಾದರು. ಅದರೊಂದಿಗೆ ಅವರು ಹಾಡುತ್ತಿದ್ದ ಹಾಡೂ ನೆನಪಾಯಿತು. "ಹಿಂದಿನ ಸಾಲಿನ ಹುಡುಗರು ಎಂದರೆ ನಮಗೇನೇನೂ ಭಯವಿಲ್ಲ" ಎನ್ನುತ್ತ ಹಾಡನ್ನು ಮುಂದುವರೆಸಿ, "ಪಾಠ ಪ್ರವಚನ ರುಚಿಸದೆ ಹೋದರೆ ಪಾಕಂಪೊಪ್ಪನು ಮೆಲ್ಲುವೆವು" ಎಂದು ಹೇಳುತ್ತಿದ್ದ ಅವರೆಲ್ಲ ಜೀವನದಲ್ಲೀಗ ಸಾಕಷ್ಟು ಯಶಸ್ಸನ್ನು ಗಳಿಸಿರುವುದು ನೋಡಿದಾಗ ಸಂತೋಷವೆನಿಸುತ್ತಿತ್ತು ವಸಂತನಿಗೆ. ಅಲ್ಲದೇ ಈಗ ಈ 'ಸ್ನೇಹ ಸಮಾಗಮ'ದ ಮುಂದಾಳತ್ವವನ್ನು ಅವರೇ ವಹಿಸಿಕೊಂಡಿದ್ದರು.


ಚಿತ್ರ ಕೃಪೆ : ಅಂತರ್ಜಾಲ

"ನೆನಪುಗಳು ಬಾಡುವುದಿಲ್ಲ!" ನಿಜವಲ್ಲವೇ? ಮೈಸೂರು ಕಾಲೇಜಿನ ದಿನದ ನೆನಪುಗಳೀಗ ವಸಂತನ ಮನದ ಗಿಡಮರಗಳಲ್ಲಿ ಚಿಗುರಾಗಿ ಮೂಡಿ, ಮೊಗ್ಗಾಗಿ, ಹೂವಾಗಿ ಅರಳಿ, ಘಮ,ಘಮಿಸಲು ಮೊದಲಿಟ್ಟವು. ಚಿಕ್ಕಳ್ಳಿಯಿಂದ ಮೈಸೂರಿನವರೆಗಿನ ಪ್ರತಿದಿನದ ಬಸ್ಸಿನ ಪ್ರಯಾಣ, ಕಾಲೇಜು, ಅಧ್ಯಾಪಕರು, ಸ್ನೇಹಿತರು, ಗ್ರಂಥಾಲಯ, ಸಾಂಪ್ರದಾಯಿಕ ನಗರಿ ಮೈಸೂರು, ಹೀಗೆ ನೂರಾರು ನೆನಪುಗಳು ಬಾಡದ ಹೂವಾಗಿದ್ದವು. ಕಾಲೇಜಿನ ಪಿಕ್ ನಿಕ್ ಗೆಂದು 'ರಂಗನತಿಟ್ಟು' ಪಕ್ಷಿಧಾಮಕ್ಕೆ ತೆರಳಿದ್ದು, ಅಲ್ಲಿನ ದೋಣಿ ವಿಹಾರ ನೆನಪಾಗಿತ್ತು.ಅವರ ಕ್ಲಾಸಿನ ಹುಡುಗರೆಲ್ಲ ಒಂದು ದೋಣಿಯಲ್ಲಿ, ಹುಡುಗಿಯರೆಲ್ಲ ಒಂದು ದೋಣಿಯಲ್ಲಿ ಕುಳಿತಾಗ, "ಹೊಳದ ತಿಳಿದ ನೀರಿನಲ್ಲಿ, ತೇಲಿಬಂದ ದೋಣಿಯಲ್ಲಿ, ಎಲ್ಲರೊಂದೆ ಸಾಲಿನಲ್ಲಿ, ಹೆರಳ ತುಂಬ ಹೂವ ಮುಡಿದ, ದೋಣಿ ತುಂಬ ಹುಡುಗಿಯರು" ಎಂದು ಕವಿತೆಯ ಸಾಲುಗಳನ್ನು ಹುಡುಗರೆಲ್ಲ ಕೂಗಿ-ಕೂಗಿ ಹೇಳಿ, ಹುಡುಗಿಯರನ್ನೆಲ್ಲ ಗೋಳಿಟ್ಟುಕೊಂಡಿದ್ದು ನೆನಪಾಗಿ ವಸಂತ ಜೋರಾಗಿ ನಕ್ಕುಬಿಟ್ಟ. ವಿಮಾನದಲ್ಲಿ ಅಕ್ಕ-ಪಕ್ಕ ಕುಳಿತವರು ತನ್ನನ್ನು ಹುಚ್ಚನೆಂದುಕೊಂಡರೇನೋ ಎಂದು ಮುಖದ ಮೇಲಿನ ಹೊದಿಕೆ ಸರಿಸಿ ಅತ್ತ-ಇತ್ತ ನೋಡಿದ. ಬಹಳಷ್ಟು ಜನ ಸಹಪ್ರಯಾಣಿಕರು ನಿದ್ದೆಗೆ ಜಾರಿದ್ದರು. ಅಲ್ಲೊಬ್ಬ-ಇಲ್ಲೊಬ್ಬರು ಮಂದ ಮಿಣುಕು ದೀಪದಲ್ಲಿ ಪುಸ್ತಕ ಓದುತ್ತಿದ್ದರು. ಮತ್ತೆ ಕೆಲವರು ಇಯರ್ ಫೋನ್ ಹಾಕಿಕೊಂಡು, ಸೀಟಿನ ಸ್ಕ್ರೀನಿನಲ್ಲಿ ಬರುತ್ತಿದ್ದ ಸಿನೆಮಾ ನೋಡುತ್ತಿದ್ದರು. ಮುಖಕ್ಕೆ ಮುಸುಕೆಳೆದುಕೊಂಡು ವಸಂತ ಮತ್ತೆ ನೆನಪಿನ ದೋಣಿ ಏರಿದ!

ಆ ದೋಣಿಯ ತುಂಬ ಕುಳಿತಿದ್ದ ಹುಡುಗಿಯರಲ್ಲಿ ಅವಳೂ ಇದ್ದಳಲ್ಲವೇ? "ದೊಡ್ಡ ಹಣೆ, ದೊಡ್ಡ ಜಡೆ, ತುಟಿಯ ಅಂಚಿನಲೊಂದು ಪುಟ್ಟ ಸಿಡುಬಿನ ಕಲೆ, ಆ ಹುಡುಗಿ ಯಾರು?" ಇವು 'ಮಲ್ಲಿಗೆ' ಕವಿಯ ಕವನದ ಸಾಲುಗಳಾಗಿದ್ದವೋ ಅಥವಾ ತನ್ನ ಮನದಲ್ಲಿ ಮೂಡಿದ ಪ್ರಶ್ನೆಯೋ ಎಂದುಕೊಂಡಿದ್ದ ವಸಂತ. ಅವಳನ್ನು ಕಂಡ ಕ್ಷಣದಿಂದಲೇ ವಸಂತನ ಮನದಲ್ಲಿ ಒಲವು ಮೂಡಿತ್ತು!

ಕಾಲೇಜಿನಲ್ಲಿ ನಡೆದ ಭಾವಗೀತೆ ಸ್ಪರ್ಧೆಯಲ್ಲಿ "ಅಂಥಿಂಥ ಹೆಣ್ಣು ನೀನಲ್ಲ, ನಿನ್ನಂಥ ಹೆಣ್ಣು ಇನ್ನಿಲ್ಲ" ಎಂದು ಹಾಡಿ ಬಹುಮಾನವನ್ನೂ ಗಿಟ್ಟಿಸಿದ್ದ. ಮೊದಮೊದಲು ಅವಳ ಹೆಸರು ತಿಳಿಯದೇ, ಅವಳನ್ನೇ ಕೇಳಲು ಧೈರ್ಯ ಸಾಲದೇ, "ಹೂಬನದ ಬಿಸಿಲಲ್ಲಿ ನರ್ತಿಸುವ ನವಿಲಿನ ದನಿಯಲ್ಲಿ ನಿನ್ನ ಹೆಸರು, ಹೊಂದಾಳೆ ಹೂವಿನಲಿ ಹೊರಟ ಪರಿಮಳದಲ್ಲಿ ಉಯ್ಯಾಲೆ ನಿನ್ನ ಹೆಸರು" ಎನ್ನುವ ಕವಿತೆಯನ್ನು ಹೇಳಿಕೊಂಡು ತಿರುಗಿದ್ದ. ಯಾರವಳು? ಅವಳೇ ಚಾರುಲತಾ!

ಮೈಸೂರಿನವಳೇ ಆಗಿದ್ದ ಚಾರುಲತಾ ಮಾರುದ್ದ ಜಡೆಯ, ಮಿಂಚುಗಣ್ಣಿನ, ಸುಂದರವಾದ ಹುಡುಗಿ. ಅವಳು ನಕ್ಕಾಗ ಕೆನ್ನೆಯಲ್ಲಿ ಮೂಡುತ್ತಿದ್ದ ಗುಳಿ, ಎಲ್ಲರನ್ನು ಅವಳ ಕಡೆ ಮತ್ತೊಮ್ಮೆ ತಿರುಗಿನೋಡುವಂತೆ ಸೆಳೆಯುತಿತ್ತು. ತನ್ನ ಉದ್ದನೆಯ ಜಡೆಗೆ ಮಲ್ಲಿಗೆಯ ದಂಡೆ ಸಿಕ್ಕಿಸಿಕೊಂಡು ಲಂಗಾ-ದಾವಣಿಯನ್ನೋ, ಚೂಡಿದಾರನ್ನೋ ತೊಟ್ಟುಕೊಂಡು ಕಾಲೇಜಿಗೆ ಬರುತ್ತಿದ್ದ ಅವಳ ಮುಖದ ಮೇಲೆ ಸದಾ ಮುಗುಳುನಗೆಯಿರುತ್ತಿತ್ತು. ಅವಳು ಮಾತನಾಡುತ್ತಿದುದು ಕಡಿಮೆಯಿದ್ದರೂ, ಕಣ್ಣುಗಳಲ್ಲಿ ಕವಿತೆಯೇ ಬರೆದಂತಿರುತ್ತಿತ್ತು. ಪುಟ್ಟದೊಂದು ಸ್ಟೇಷನರಿ ಅಂಗಡಿಯಿಟ್ಟುಕೊಂಡಿದ್ದ ತಂದೆ, ಅಂಗಡಿಯಲ್ಲಿ ತಂದೆಗೆ ಸಹಾಯ ಮಾಡಿಕೊಂಡಿದ್ದ ತಾಯಿ, ಇಬ್ಬರು ತಂಗಿಯರು, ಒಬ್ಬ ತಮ್ಮನಿಂದ ಕೂಡಿದ ತುಂಬಿದ ಕುಟುಂಬ ಅವಳದಾಗಿತ್ತು. ತನ್ನ ಒಲವನ್ನು ಅವಳಲ್ಲಿ ಹೇಳಿಕೊಳ್ಳಲು ಆಗದೇ ಒದ್ದಾಡುತ್ತಿದ್ದ ವಸಂತ. ಅವಳ ಆಪ್ತ ಗೆಳತಿಯಾಗಿದ್ದ ಜಯಶ್ರೀಯನ್ನು ಮಾತನಾಡಿಸಲು ಹೋಗಿ, ವಾಚಾಳಿಯಾಗಿದ್ದ ಜಯಾಳ ಮಾತುಗಳಿಗೆ ಹೆದರಿ ತನ್ನ ಮನದ ಮಾತನ್ನು ಹೇಳದೇ ಸುಮ್ಮನಾಗಿದ್ದ. ಚಾರುಲತಾ ವಸಂತನೆಡೆಗೆ ದೃಷ್ಟಿ ಹಾಯಿಸುತ್ತಿದ್ದುದೇ ಕಡಿಮೆ. ಅವಳ ಒಂದು ಕಣ್ಣೋಟ ಪಡೆಯಲು ಏನೋನೋ ಪ್ರಯತ್ನಗಳನ್ನು ಮಾಡಿ ವಿಫಲನಾಗಿದ್ದ ವಸಂತ. ಮನಸ್ಸಿನ ತುಂಬ ತನ್ನ ಒಲವಿನ ಯೋಚನೆಗಳನ್ನು ತುಂಬಿಕೊಂಡು, ದ್ವಿತೀಯ ಪಿ.ಯು.ಸಿ. ಪರೀಕ್ಷೆಯ ತಯಾರಿಯಲ್ಲಿದ್ದ ವಸಂತ ಆದಿನ ಹಾಲ್ ಟಿಕೆಟ್ ಪಡೆದುಕೊಳ್ಳಲು ಕಾಲೇಜಿಗೆ ಹೋದಾಗ ಜಯಶ್ರೀಯೊಂದಿಗೆ ಚಾರುಲತಾ ಕಂಡಿದ್ದಳು. ಅದೇನೋ ಇದ್ದಕ್ಕಿದಂತೆ ಚಾರುಲತಾ ತನ್ನನ್ನು ನೋಡಿ ನಕ್ಕಂತೆನಿಸಿತು ವಸಂತನಿಗೆ. ಅವನ ಸಂತೋಷಕ್ಕೆ ಪಾರವೇ ಇರಲಿಲ್ಲ. ಮನಸ್ಸು ಹಕ್ಕಿಯಾಗಿ ಹಾಡುತ್ತಿದೆ ಎನಿಸಿತು.

"ನಕ್ಕ ಹಾಗೆ ನಟಿಸಬೇಡ, ನಕ್ಕುಬಿಡು ಸುಮ್ಮನೆ,
ಬೆಳಕಾಗಲಿ ತಂಪಾಗಲಿ ನಿನ್ನೊಲವಿನ ಒಳಮನೆ!
ಬಾ ಹತ್ತಿರ, ಬೆರಳ ಹಿಡಿದು, ಮುಂದೆ ಸಾಗು ಸುಮ್ಮನೆ,
ನಕ್ಕು ಬಿಡು, ನೋಡುತ್ತಿದೆ ಲೋಕವೆಲ್ಲ ನಮ್ಮನೆ"


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

"ಒಲುಮೆಯಿಂದ ಒಲುಮೆಗೆ"

# ನಿನ್ನೊಲುಮೆಯಿಂದಲೇ

ಎನ್ನುವ ಕವಿಯ ಮಾತುಗಳನ್ನು ಹೇಳಬೇಕೆಂದುಕೊಳ್ಳುವಷ್ಟರಲ್ಲಿ ವಸಂತನಿಗೆ ಕಂಡಿದ್ದು ದೂರದಲ್ಲಿ ಹೋಗುತ್ತಿದ್ದ ಚಾರುಲತೆಯ ಬೆನ್ನಿನ ಮೇಲೆ ಅತ್ತಿತ್ತ ಆಡುತ್ತಿದ್ದ ಉದ್ದನೆಯ ಜಡೆ!

ಪ್ರವೇಶ ಪರೀಕ್ಷೆಯ ಫಲಿತಾಂಶ ಹೊರಬಿದ್ದು, ಎಂದಿನಂತೆ ಒಳ್ಳೆಯ ಅಂಕ ಗಳಿಸಿದ್ದ ವಸಂತನಿಗೆ ಐ.ಐ.ಟಿ. ಖರಗಪುರದಲ್ಲಿ ಇಂಜಿನಿಯರಿಂಗ್ ಸೀಟು ಸಿಕ್ಕಿತ್ತು. ಅವನ ಕೆಲವು ಸ್ನೇಹಿತರಿಗೆ ರಾಜ್ಯದ ಬೇರೆ,ಬೇರೆ ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಸಿಕ್ಕಿತ್ತು. ರಾಘು,ಸೀನ, ಕಿಟ್ಟಿ ಕಡಿಮೆ ಅಂಕ ಗಳಿಸಿ ಪಾಸ್ ಆಗಿ, ಮೈಸೂರಿನಲ್ಲೇ ಬಿ.ಎಸ್ಸಿ. ಓದುವ ಯೋಚನೆ ಮಾಡಿದ್ದರು. ಚಾರುಲತಾಳ ಮುಂದಿನ ಓದಿನ ಯೋಚನೆಯೇನಿರಬಹುದು? ರಿಸಲ್ಟಿನ ದಿನವೂ ಅವಳು ಕಾಣಿಸಿರಲಿಲ್ಲ. ಅವಳ ಮನೆಯ ಹತ್ತಿರ ಹೋಗಿ ವಿಚಾರಿಸಲೇ? ಅವಳ ಅಪ್ಪ-ಅಮ್ಮ ಏನೆಂದುಕೊಂಡಾರು? ಹೀಗೇ ಏನೇನೋ ಪ್ರಶ್ನೆಗಳು ಮನಸ್ಸಿನಲ್ಲಿ ಮೂಡಿದ್ದರೂ, ವಸಂತನಿಗೆ ಏನೂ ಮಾಡಲು ತೋಚದೇ ಚಿಕ್ಕಳ್ಳಿಯ ಬಸ್ಸನ್ನೇರಿದ್ದ. ಕಿಟಿಕಿಗೆ ತಲೆಯೊರಗಿಸಿ ಕುಳಿತಿದ್ದ ಅವನಿಗೆ, ಆದಿನ ಅವಳ ನಗು ಏನೋ ಹೇಳಿದಂತಿತ್ತು ಎನಿಸಿತ್ತು.

ಶ್ಯಾಮರಾಯರಿಗೆ ಚಿಕ್ಕಳ್ಳಿಯ ಶಾಲೆಯಿಂದ ಹೊಸಹಳ್ಳಿಯ ಮಾಧ್ಯಮಿಕ ಶಾಲೆಗೆ ಹೆಡ್ ಮೇಷ್ಟ್ರಾಗಿ ವರ್ಗವಾಗಿತ್ತು. ಸಾಮಾನು-ಸರಂಜಾಮುಗಳನ್ನು ಸಾಗಿಸುವಲ್ಲಿ ಅಪ್ಪನಿಗೆ ನೆರವಾಗಿ ನಂತರ ಬೆಂಗಳೂರಿಗೆ ಹೋಗಿ, ಅಲ್ಲಿಂದ ಖರಗಪುರಕ್ಕೆ ಹೋಗುವ ಯೋಚನೆ ಮಾಡಿದ್ದ ವಸಂತ. ಇಂಜಿನಿಯರಿಂಗ್ ವಿದ್ಯಾಭ್ಯಾಸಕ್ಕೆಂದು ಪ್ರತಿಷ್ಠಿತ ಕಾಲೇಜಿಗೆ ಹೋಗುತ್ತಿರುವ ಮಗನಿಗೆ ಒಳ್ಳೆಯ ಬಟ್ಟೆ, ಕೋಟು, ಬೂಟುಗಳನ್ನು ಖರೀದಿಸಲು ಶ್ಯಾಮರಾಯರು ಹೇಳಿದರು. ಆದರೆ ಆದಿನ ಅವರಿಗೆ ತಮ್ಮ ಹೊಸ ಶಾಲೆಗೆ ಹೋಗಬೇಕಾಗಿ ಬಂದಿದ್ದರಿಂದ, ವಸಂತನೊಡನೆ ಮೈಸೂರಿಗೆ ಬರಲಾಗಲಿಲ್ಲ. ಮಧ್ಯಾಹ್ನದ 'ಕಾವೇರಿ' ಏರಿ ಮೈಸೂರಿಗೆ ಬಂದ ವಸಂತ ಸಯ್ಯಾಜಿರಾವ್ ರಸ್ತೆಯಲ್ಲಿ ಬಟ್ಟೆ, ಬೂಟು ಖರೀದಿಸಿ ಮಿಕ್ಕಿದ ಹಣದಲ್ಲಿ ತಮ್ಮ ಸುಮಂತನಿಗೇನಾದರೂ ಆಟಿಕೆ ಕೊಳ್ಳಬೇಕೆಂದು ಹತ್ತಿರದ ಸ್ಟೇಷನರಿ ಅಂಗಡಿಗೆ ಹೋದಾಗ ಅಲ್ಲಿ ಕಂಡಿದ್ದಳು ಚಾರುಲತಾ! ಪುಟ್ಟ ತಮ್ಮನೊಂದಿಗೆ ಬಂದಿದ್ದ ಅವಳ ಜೊತೆ ಮಾತನಾಡಲು ಮುಂದಾದ ವಸಂತ. ಅಂತೂ ಆದಿನ ಚಾರುಲತೆಗೆ ತನ್ನ ಒಲವನ್ನು ನಿವೇದಿಸಿಕೊಂಡ. ತನ್ನ ಪ್ರೀತಿಯ ಆಳವನ್ನು ಹೇಳಿಕೊಂಡ, ಅವಳಿಲ್ಲದ ತನ್ನ ಬದುಕು ನೀರಸ ಎಂದ. ತಾನು ಇಂಜಿನಿಯರಿಂಗ್ ಓದಿ ಮುಗಿಸುವವರೆಗೆ ತನಗಾಗಿ ಕಾಯುವೆಯಾ? ಎಂದು ಅವಳಲ್ಲಿ ಕೇಳಿಕೊಂಡ. ವಸಂತನ ಮಾತುಗಳನ್ನು ಕೇಳಿದ ಚಾರುಲತಾಳ ಕಣ್ಣಾಲಿಗಳು ತುಂಬಿ ಬಂದವು. ಮುಖದ ಮೇಲೊಂದು ನೋವಿನ ನಗು! ಮಾತನಾಡದೇ ಎರಡು ಹೆಜ್ಜೆ ಹಿಂದೆ ಸರಿದು, ಆ ಅಂಗಡಿಯ ಮಾಲೀಕನ ಕೈಗೆ ದುಡ್ಡು ಕೊಟ್ಟು ಹಿಂತಿರುಗಿ ನೋಡದೇ ಹೊರಟುಹೋದಳು. ತನ್ನಿಂದ ದೂರ ಹೋಗುತ್ತಿರುವ ತನ್ನ ಒಲವನ್ನು ಕಂಡು "ನೀನರಿಯದಿರಬಹುದು, ನೀ ನಂಬದಿರಬಹುದು, ನೀನೊಲ್ಲದಿರಬಹುದು ನನ್ನೊಲವನು" ಎಂದು ವಸಂತದ ಹೃದಯ ನೊಂದು ನುಡಿಯಿತು.

• * * *

ದುಬೈ ತಲುಪುತ್ತಿದ್ದೇವೆಂದು ವಿವರಣೆ ನೀಡುತ್ತಿದ್ದ ಪೈಲೆಟ್ ನ ಧ್ವನಿ ಕೇಳಿಸಿದಾಗ ನಿದ್ದೆಯಿಂದೆದ್ದ ವಸಂತ. ಬೆಂಗಳೂರಿಗೆ ಪ್ರಯಾಣ ಮುಂದುವರೆಸಲು ಇನ್ನೂ ನಾಲ್ಕು ಗಂಟೆಗಳ ಸಮಯವಿತ್ತು. ಏರ್ ಪೋರ್ಟಿನಲ್ಲಿನ ಅಂಗಡಿಗಳನ್ನೊಮ್ಮೆ ಸುತ್ತಿ ತಮ್ಮ ಸುಮಂತನ ಮಕ್ಕಳಿಗೆ ಇನ್ನೇನಾದರೂ ಆಟಿಕೆಗಳನ್ನು, ಚಾಕಲೇಟುಗಳನ್ನು ಖರೀದಿಸಿದರಾಯಿತೆಂದುಕೊಂಡ. ಮತ್ತೊಮ್ಮೆ ಸೆಕ್ಯುರಿಟಿ ಚೆಕ್ ಮುಗಿಸಿಕೊಂಡು, ಟರ್ಮಿನಲ್ಲಿನ ಬಹುತೇಕ ಅಂಗಡಿಗಳನ್ನೊಮ್ಮೆ ಸುತ್ತಿ, ಬೆಂಗಳೂರಿಗೆ ಹೊರಡಲಿರುವ ಫ್ಲೈಟಿಗೆ ನಮೂದಿಸಿದ ಗೇಟ್ ಹತ್ತಿರ ಬಂದು ಕುಳಿತುಕೊಂಡ. ಸಮಯ ಕಳೆಯಲು ಬ್ಯಾಗಿನಿಂದ ಕೆ.ಎಸ್.ನ. ಅವರ 'ಮಲ್ಲಿಗೆಯ ಮಾಲೆ' ಪುಸ್ತಕ ತೆರೆದು ಕುಳಿತ. ಅದರಲ್ಲಿದ್ದ ಅದೆಷ್ಟೋ ಕವನಗಳನ್ನು ಹಲವಾರು ಬಾರಿ ಓದಿದ್ದರಿಂದ ಈಗ ಸುಮ್ಮನೆ ಪುಟ ತಿರುಗಿಸುತ್ತಾ ಕುಳಿತ. ಮಲ್ಲಿಗೆಯ ಮಾಲೆ ಚಾರುಲತೆಯನ್ನು ನೆನಪಿಸಿತ್ತು. 'ಸ್ನೇಹ ಕೂಟ'ದಲ್ಲಿ ಚಾರುಲತಾಳ ಭೇಟಿಯಾಗಬಹುದೇ? ಮನಸ್ಸು ಪ್ರಶ್ನಿಸಿತ್ತು. ಅಂದಹಾಗೆ ಅವಳು ಯಾವುದೇ ಹಳೆ ಸ್ನೇಹಿತರ ಸಂಪರ್ಕದಲ್ಲಿರಲಿಲ್ಲ. ಫೇಸ್ ಬುಕ್, ವಾಟ್ಸ್ಯಾಪ್ ಗಳಲ್ಲಿ ಇರಲಿಲ್ಲ. ಮೈಸೂರಿನಲ್ಲೀಗ ಪ್ರಿಂಟಿಂಗ್ ಪ್ರೆಸ್ ಒಂದರ ಮಾಲೀಕನಾಗಿದ್ದ ಸೀನ, ಅಲ್ಲಿನ ದೈನಂದಿಕ ಪತ್ರಿಕೆಯಲ್ಲಿ ಈ ಸ್ನೇಹ ಸಮಾಗಮದ ಸಂದೇಶವನ್ನು ಹಾಕಿಸುವುದಾಗಿ ಹೇಳಿದ್ದನ್ನು ನೆನಪಿಸಿಕೊಂಡ ವಸಂತ. ಸದ್ಯಕ್ಕೆ ಸಂಪರ್ಕದಲ್ಲಿರದ ಇನ್ನೂ ಕೆಲವು ಸ್ನೇಹಿತರು ಸಂದೇಶವನ್ನು ಓದಿಕೊಂಡು ಹಳೆ ಗೆಳೆಯ, ಗೆಳತಿಯರನ್ನು ಭೇಟಿಮಾಡಲು ಬರಬಹುದು ಎಂದು ರಾಘು ಸಹ ಹೇಳಿದ್ದ. ಚಾರುಲತಾ ಮೈಸೂರಿನಲ್ಲೇ ಇರಬಹುದಾ? ಛೇ, ನಾನೇಕೆ ಇಷ್ಟು ವರ್ಷಗಳ ನಂತರ ಹೀಗೆ ಯೋಚಿಸುತ್ತಿದ್ದೇನೆ. ನಾನೇನೋ ನನ್ನ ಒಲವನ್ನು ಕಾಯ್ದುಕೊಂಡು ಒಂಟಿಯಾಗಿ ಬದುಕುತ್ತಿದ್ದೇನೆ. ಅವಳು ಗಂಡ, ಮನೆ, ಮಕ್ಕಳು ಎಂದು ಸಂಸಾರಿಯಾಗಿರುತ್ತಾಳೆ. ನನ್ನ ಈ ಒಲವು ನನ್ನ ನೆನಪುಗಳಲ್ಲಿ ಎಂದೂ ಆರದ ದೀಪವಾಗಿರಲಿ, ಅವಳ ಜೀವನ ಅವಳಿಗಿರಲಿ ಎಂದುಕೊಳ್ಳುತ್ತಿರುವಾಗಲೇ ವಿಮಾನ ಬೆಂಗಳೂರು ತಲುಪಿತ್ತು. ಅಲ್ಲಿ ಸುಮಂತನ ಮನೆಗೆ ಹೋಗಿ ಎರಡು ದಿನವಿದ್ದು ನಂತರ ಮೈಸೂರಿಗೆ ಬಂದಿದ್ದ ವಸಂತ.

* * *

ಮೈಸೂರು ತಲುಪಿದ ವಸಂತನಿಗೆ, ಅದೆಷ್ಟೋ ವರ್ಷಗಳ ನಂತರವೂ ಆ ಊರು ಅಪರಿಚಿತವೆನಿಸಲಿಲ್ಲ. ಅಲ್ಲಿ ಹೆಚ್ಚಿನ ಬದಲಾವಣೆಯೇನೂ ಕಾಣಿಸಲಿಲ್ಲ ಅವನಿಗೆ. ಈ ಮೊದಲೇ ರಾಘು ಬುಕ್ ಮಾಡಿದ್ದ ಹೋಟೇಲಿಗೆ ಹೋಗಿ, ತನ್ನ ರೂಂ ಪಡೆದುಕೊಂಡ ವಸಂತ, ಕಿಟ್ಟಿ ಮತ್ತು ಸೀನರೊಂದಿಗೆ ಮಾತನಾಡಿ ಮರುದಿನದ 'ಸ್ನೇಹ ಸಮಾಗಮ' ಕಾರ್ಯಕ್ರಮದ ವಿವರಗಳೇನೆಂದು ಕೇಳಿದ. ಬೆಳಿಗ್ಗೆ ೯ ಗಂಟೆಗೆ 'ಗಾಯತ್ರಿ ಟಿಫನ್ ರೂಂ' ನಲ್ಲಿ ತಿಂಡಿ ತಿಂದುಕೊಂಡು ಕಾಲೇಜಿನ ಹತ್ತಿರ ಎಲ್ಲ ಸ್ನೇಹಿತರೂ ಸೇರುವುದು, ನಮಗೆ ಪಾಠ ಮಾಡಿದ್ದ ಕೆಲವು ಪ್ರಾಧ್ಯಾಪಕರನ್ನು ಭೇಟಿಮಾಡಿ, ಮಧ್ಯಾಹ್ನ 'ಕಿಂಗ್ಸ್ ಕೋರ್ಟ'ಗೆ ಹೋಗಿ ಊಟ ಮುಗಿಸಿಕೊಂಡು, ಸಂಜೆಯವರೆಗೆ ಕಾಲಕಳೆಯುವುದು, ನಂತರ ಬೀಳ್ಕೊಡುಗೆ ಎಂದು ಸೀನ ವಿವರವಾಗಿ ವರದಿ ಒಪ್ಪಿಸಿದ್ದ. ಇಪ್ಪತ್ತೇಳು ವರ್ಷಗಳ ನಂತರವೂ ತನ್ನ ಗೆಳೆಯರಲ್ಲಿ ಅದೇ ಆತ್ಮೀಯತೆಯನ್ನು ಕಂಡ ವಸಂತ ಸಂತೋಷಗೊಂಡಿದ್ದ.

ಮರುದಿನದ 'ಸ್ನೇಹ ಸಮಾಗಮ' ಎಲ್ಲರಿಗೂ ಅವರ ಬದುಕಿನ ಒಂದು ಸುಂದರ ಅನುಭವವಾಗಿತ್ತು. ದೇಶ-ವಿದೇಶದ ಬೇರೆ, ಬೇರೆ ಊರುಗಳಲ್ಲಿ ನೆಲೆಸಿರುವ ಗೆಳೆಯ, ಗೆಳತಿಯರು ಅದೆಷ್ಟೋ ವರ್ಷಗಳ ನಂತರ ಭೇಟಿಯಾಗಿ, ಸದ್ಯದ ಬದುಕನ್ನು ಮರೆತು ಮತ್ತೆ ಕಾಲೇಜು ಹುಡುಗರಂತಾಗಿದ್ದರು. ಬದುಕಿನ ನೋವು, ನಲಿವುಗಳನ್ನು ಈ ಗುಂಪಿನೊಂದಿಗೆ ಹಂಚಿಕೊಂಡಿದ್ದರು. ಒಬ್ಬರಿಗೊಬ್ಬರು ತಮ್ಮಲ್ಲಿ ಎದ್ದು ಕಾಣುವ ಬಾಹ್ಯ ರೂಪದ ಬದಲಾವಣೆಯನ್ನು ನೋಡಿಕೊಂಡು, ಹಾಸ್ಯ ಮಾಡಿಕೊಂಡು ನಕ್ಕಿದ್ದರು. ಆದರೆ ಎಲ್ಲದರಲ್ಲಿಯೂ ಹಳೆ ಸ್ನೇಹದ ಆತ್ಮೀಯತೆ ಎದ್ದುಕಂಡಿತ್ತು. ಈ ಎಲ್ಲ ಸಂಭ್ರಮಗಳನ್ನು ತನ್ನ ಅನುಭವದ ಪೆಟ್ಟಿಗೆಗೆ ಹಾಕಿಕೊಳ್ಳುತ್ತಿದ್ದ ವಸಂತನಿಗೆ ಯಾರಿಂದಲೂ ಚಾರುಲತಾಳ ಸುಳಿವೇ ಸಿಗದಿದ್ದಾಗ ನಿರಾಸೆಯೆನಿಸಿತ್ತು. ಆ ಸಂತೋಷ ಕೂಟದಲ್ಲಿಯೂ ಅವನ ಕಣ್ಣುಗಳು ಯಾರನ್ನೋ ಹುಡುಕುತ್ತಿರುವಂತೆ ಕಂಡವು. ಎಲ್ಲರೂ ಮಧ್ಯಾಹ್ನದ ಊಟ ಮುಗಿಸಿ ಹರಟುತ್ತಾ ಕುಳಿತಿದ್ದಾಗ ಅಲ್ಲಿಗೆ ಈ ಸ್ನೇಹಿತರನ್ನೆಲ್ಲ ಹುಡುಕುತ್ತ ಅವಸರ-ಅವಸರವಾಗಿ ಜಯಶ್ರೀ ಬಂದಳು.


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

*"ಒಲುಮೆಯಿಂದ ಒಲುಮೆಗೆ"*

# ನಿನ್ನೊಲುಮೆಯಿಂದಲೇ

ಇಷ್ಟು ದಿನ ಯಾರ ಸಂಪರ್ಕಕ್ಕೂ ಸಿಗದೇ ಇದ್ದ ಜಯಾ ಆ ದಿನದ ಪೇಪರಿನಲ್ಲಿ ಈ ಸ್ನೇಹಕೂಟದ ಸುದ್ದಿಯನ್ನು ತಡವಾಗಿ ಓದಿಕೊಂಡು, ಹಳೆ ಸ್ನೇಹಿತರನ್ನು ಭೇಟಿಮಾಡುವ ಅವಕಾಶ ಎಲ್ಲಿ ತಪ್ಪಿ ಹೋಗುವುದೋ ಎಂದು ಓಡೋಡುತ್ತ ಬಂದಿದ್ದಳು. ಮೊದಲಿನಂತೆ ಈಗಲೂ ಎಲ್ಲರಿಗಿಂತಲೂ ಹೆಚ್ಚಿಗೆ ಮಾತನಾಡಿ ತನ್ನ ವಾಚಾಳಿತನ ಬದಲಾಗಿಲ್ಲ ಎಂದು ಎಲ್ಲರಿಗೂ ಮನವರಿಕೆ ಮಾಡಿಕೊಟ್ಟಳು. ತನ್ನ ಮಕ್ಕಳಿಬ್ಬರೂ ತಾವು ಓದಿದ ಕಾಲೇಜಿನಲ್ಲಿಯೇ ಓದುತ್ತಿರುವುದಾಗಿ ಹೇಳಿದಳು.

ಹಿಂದಿನ ಬೆಂಚಿನವರೆಂದು ಕರೆಸಿಕೊಳ್ಳುತ್ತಿದ್ದ ಸೀನ, ರಾಘು, ಕಿಟ್ಟಿ ಈ 'ಸ್ನೇಹ ಸಮಾಗಮ'ವನ್ನು ತುಂಬಾ ವ್ಯವಸ್ಥಿತವಾಗಿ ಆಯೋಜಿಸಿದ್ದರು. ಸ್ನೇಹಿತರೆಲ್ಲ ಆ ಮೂವರನ್ನು ಹಾಡಿ ಹೊಗಳಿದರು. ಸ್ನೇಹಿತರಿಂದ ಬೀಳ್ಕೊಂಡು, ಇನ್ನೇನು ಹೊಟೇಲಿನತ್ತ ಹೋಗಬೇಕೆಂದಿದ್ದ ವಸಂತನನ್ನು ನಿಲ್ಲಿಸಿ ಮಾತನಾಡಿಸಿದ ಜಯಶ್ರೀ, "ಯಾಕೋ ವಸಂತ, ಆಗೇನೋ ಒಲವು-ಗಿಲವು ಅಂತ ಅಂದಿದ್ದೋನು ಈಗ ಚಾರುಲತಾಳ ಬಗ್ಗೆ ಏನೂ ಕೇಳಲೇ ಇಲ್ಲ?" ಅಂದಳು. ಅವಳಿಂದ ಆ ಪ್ರಶ್ನೆ ನಿರೀಕ್ಷಿಸಿರದ ವಸಂತ ದಂಗಾಗಿಹೋದ. ಸಾವರಿಸಿಕೊಂಡು ಮಾತನಾಡಬೇಕೆನ್ನುವಷ್ಟರಲ್ಲಿ ತನ್ನ ಮಾತು ಮುಂದುವರೆಸಿದ ಜಯಾ, "ಹೌದಪ್ಪ , ನೀನೀಗ ದೊಡ್ಡ ಮನುಷ್ಯ ಆಗಿದ್ದೀಯ, ಎಷ್ಟೋ ವರ್ಷಗಳಿಂದ ಅಮೇರಿಕಾದಲ್ಲಿದ್ದೀಯ, ನಿಂಗ್ಯಾಕೆ ಬೇಕು ಈ ಊರಿನವರ ವಿಷಯ? ಹೆಂಡತಿ, ಮಕ್ಕಳು ಅಂತ ಆರಾಮಾಗಿ ಇರೋರು ನೀವು" ಎನ್ನುವಾಗಲೇ ಕಿಟ್ಟಿ ಅವಳಿಗೆ ಉತ್ತರ ಹೇಳಿದ್ದ. "ಅಯ್ಯೋ, ಅದೇನೋ ಒಲವು, ಒಲವು ಅಂತ ಹಾಗೇ ಒಂಟಿಯಾಗಿ ಇದ್ದು ಬಿಟ್ಟಿದ್ದಾನೆ ಅವನು. ಅದ್ಯಾರೋ ಅವನ ಒಲವು?" ಎಂದ. "ಇನ್ಯಾರೋ, ಅದೇ ಉದ್ದ ಜಡೆ ಚಾರುಲತಾ! ಪಾಪ, ಇಲ್ಲೇ ಮಹಿಳಾ ಸೇವಾಶ್ರಮದಲ್ಲಿ ಕೆಲಸ ಮಾಡ್ತಿದ್ದಾಳೆ" ಎಂದಳು ಜಯಾ. 'ಚಾರುಲತಾ' ಎಂದ ಕೂಡಲೇ ಒಂದೆರಡು ಗಳಿಗೆ ಕಂಪಿಸಿ, ಬೆವರಿದಂತಾದ ವಸಂತ. "ಅದೇ ಆ ಗುಳಿಕೆನ್ನೆ ಚಾರುಲತಾನಾ? ಇಲ್ಲೇ ಇದ್ದಾಳಾ, ಗೊತ್ತೇ ಆಗ್ಲಿಲ್ಲ? 'ಸೇವಾಶ್ರಮ'ದಲ್ಲಿ ಏನ್ಮಾಡ್ತಿದ್ದಾಳೆ?" ಎಂದು ಸೀನ ಕೇಳಿದಾಗ, ಜಯಶ್ರೀ ಚಾರುಲತೆಯ ಬದುಕಿನ ಪುಟಗಳನ್ನು ತೆರೆದಿಟ್ಟಳು. ಚಾರುಲತಾಳ ಅಪ್ಪ ಅಂಗಡಿ ವ್ಯಾಪಾರದಲ್ಲಿ ಭಾರೀ ನಷ್ಟ ಅನುಭವಿಸಿ, ಅನಾರೋಗ್ಯದಿಂದ ಹಾಸಿಗೆ ಹಿಡಿದಾಗ ಅವಳ ಅಮ್ಮ ಅವರ ಆರೈಕೆಯಲ್ಲಿ ತೊಡಗಿಕೊಳ್ಳುವಂತಾಗಿತ್ತು. ತನ್ನ ಓದನ್ನು ಮುಂದುವರಿಸದೆ, ಕೆಲಸವೊಂದನ್ನು ಹಿಡಿದು ಚಾರುಲತಾ ಮನೆಯ ಜವಾಬ್ದಾರಿಗಳನ್ನು ಹೊತ್ತಿದ್ದಳು. ಅಮ್ಮ-ಅಪ್ಪನ ಆರೈಕೆ, ತಮ್ಮ-ತಂಗಿಯರ ಓದು, ಮದುವೆ ಎಂದು ತಾನು ಮದುವೆಯನ್ನೂ ಮಾಡಿಕೊಳ್ಳದೇ ಈ ಎಲ್ಲ ವರ್ಷಗಳನ್ನು ಕಳೆದಿದ್ದಳು. ಈಗ ತಮ್ಮ-ತಂಗಿಯರೆಲ್ಲ ಅವರವರ ಮನೆ, ಕುಟುಂಬವೆಂದು ಬೇರೆ, ಬೇರೆ ಊರು ಸೇರಿ ಇತ್ತೀಚೆಗೆ ಮೈಸೂರಿಗೆ ಬಾರದಂತಾದಾಗ ಒಂಟಿಯಾಗಿದ್ದ ಚಾರುಲತಾ 'ಸೇವಾಶ್ರಮ'ದಲ್ಲಿ ಕೆಲಸಕ್ಕೆ ಸೇರಿಕೊಂಡು ಅಲ್ಲೇ ನೆಲೆಸಿದ್ದಳು. ಚಾರುಲತಾಳ ಬದುಕಿನ ಬವಣೆಯನ್ನು ಕೇಳಿದ ವಸಂತನ ಕಣ್ಣಂಚು ತೇವಗೊಂಡವು. ದುಬೈ ಏರ್ ಪೋರ್ಟಿನಲ್ಲಿ ಓದುತ್ತಿದ್ದ ಕವನದ ಸಾಲುಗಳು ಮಸಕು-ಮಸಕಾಗಿ ಕಣ್ಣ ಮುಂದೆ ತೇಲಿಬಂದವು.

"ನೆನಪಿನಂಗಳದಲ್ಲಿ ನಕ್ಷತ್ರಗಳ ಚೆಲ್ಲಿ ಎತ್ತ ಹೋದೆಯಾ ನೀನು, ನನ್ನ ಗೆಳೆಯಾ?

ನೀಲಾಂತರಿಕ್ಷದಲಿ ವಿಮಾನವೊಂದನು ಹತ್ತಿ ನೀನು ನಡೆದೇ ನಡೆದೆ ದೂರದೆಡೆಗೆ,

ಬಿರುಗಾಳಿಯನು ದಾಟಿ ಬಾ ನನ್ನ ಬಳಿಗೆ, ತೆರೆದ ಬಾಗಿಲು, ಬೆಳ್ಳಿ ಬೆಳಕು ಮನೆಯೊಳಗೆ."

* * * *

ಜಯಶ್ರೀಯೊಂದಿಗೆ ಸೀನ, ರಾಘು ಮತ್ತು ವಸಂತ ಮಹಿಳಾ ಸೇವಾಶ್ರಮಕ್ಕೆ ಹೋದಾಗ, ಕೈಯಲ್ಲಿ ಪುಸ್ತಕ ಹಿಡಿದಿದ್ದ ಚಾರುಲತಾ ಅಲ್ಲಿನ ವೃದ್ಧರಿಗೆ ಏನೋ ಓದಿ ಹೇಳುತ್ತಿದ್ದಳು. ಹತ್ತಿರ ಹೋದಾಗ ಅವಳ ಧ್ವನಿ ಕೇಳಿಸಿತ್ತು. ಅವಳು ಏನು ಓದಿ ಹೇಳುತ್ತಿದ್ದಾಳೆಂದು ಕೇಳಿಸಿಕೊಳ್ಳುವ ಯೋಚನೆ ವಸಂತನಿಗಿರಲಿಲ್ಲ. ಚಾರುಲತಾಳನ್ನು ನೋಡಿದ ತಕ್ಷಣ ಅವನ ಕಿವಿಯಲ್ಲಿ "ನನ್ನಿನಿಯ, ನಿನ್ನನೇ ಬಯಸುವೆನು; ಅಗಲಿ, ಕೊರಗಿ ನಾನಿಲ್ಲಿ ಕೊರಗುವೆನು ದುಃಖದಲಿ ತೇಲಿ ಮುಳುಗಿ" ಎನ್ನುವ ಸಾಲುಗಳೇ ಧ್ವನಿಸುತ್ತಿದ್ದವು. ಒಬ್ಬರನ್ನೊಬ್ಬರು ನೋಡಿದ ವಸಂತ ಮತ್ತು ಚಾರುಲತಾ ಅದೆಷ್ಟೋ ಹೊತ್ತು ಮೌನವಾಗಿದ್ದರು. ಸ್ವಲ್ಪ ಸಮಯದ ನಂತರ ಇಷ್ಟು ವರ್ಷಗಳ ತಮ್ಮ-ತಮ್ಮ ಬದುಕಿನ ಬಗ್ಗೆ ಮಾತನಾಡಿದರು. ಒಬ್ಬರನ್ನೊಬ್ಬರು ನೋಡಿ ದುಃಖಪಟ್ಟರು, ಸಂತೋಷಗೊಂಡರು ಮತ್ತು ಮುಂದಿನ ಬದುಕಿನ ನಿರ್ಧಾರ ಮಾಡಿದರು!

ಮುಂದೆ ನಡೆದದ್ದೆಲ್ಲ ಕನಸಿನಲ್ಲೂ ನೆನೆಸದ ಸುಂದರ ಕಥೆಯಾಗಿ ಕಂಡಿತ್ತು. ಆಪ್ತ ಸ್ನೇಹಿತರ ಸಮ್ಮುಖದಲ್ಲಿ, ದೇವಸ್ಥಾನದಲ್ಲಿ ಹಾರ ಬದಲಿಸಿಕೊಂಡು ಸತಿ-ಪತಿಗಳಾದರು ವಸಂತ ಮತ್ತು ಚಾರುಲತಾ. ಇಲ್ಲಿಯವರೆಗಿನ ಬದುಕಿನಲ್ಲಿ ನಲಿವಿಗಿಂತ ನೋವನ್ನೇ ಹೆಚ್ಚಾಗಿ ಕಂಡು, ಬಂದ ಸಂಕಷ್ಟಗಳನ್ನೆಲ್ಲ ಅನುಭವಿಸಿ ಬಳಲಿದ್ದರೂ, ಧೃತಿಗೆಡದೆ ಎದುರಿಸಿ ನಿಂತಿದ್ದ ಚಾರುಲತೆಯ ಬಾಳಿನಲ್ಲಿ 'ಶಿಶಿರ'ದ ದಿನಗಳು ಕೊನೆಗೊಳ್ಳಲು 'ವಿಳಂಬ'ವಾದರೂ ಆ ದಿನ 'ವಸಂತ'ನ ಆಗಮನವಾಗಿತ್ತು! 'ಮಲ್ಲಿಗೆ ಮಾಲೆ' ಯ ಈ ಸಾಲುಗಳು ಅರ್ಥ ಕಂಡುಕೊಂಡಿದ್ದವು.



"ಬೇಕು, ಬೇಡ- ದಡಗಳೆರಡು; ಒಲುಮೆ ಗಂಗೆ ಹರಿವುದು, ಕಾದು ಕೊರಗಿ ದಾಟಬೇಕು; ಒಲುಮೆ ಒಲಿದೇ ಒಲಿವುದು".



## ಕವನ

### ನಿಮ್ಮೊಲುಮೆಯಿಂದಲೆ ಬಾಳು ಸೊಗಸಾಗಿರಲು!!!



ವಿ.ಪ್ರಸನ್ನ ಕುಮಾರ್

ಕವಿಯೋರ್ವ ಹೇಳಿದರು ನಿನ್ನೊಲುಮೆಯಿಂದಲೆ ಬಾಳು
ಬೆಳಕಾಗಿರಲು "ಚಂದ್ರಮುಖಿ ನೀನೆನಲು ತಪ್ಪೇನು"
ನಿಮೆಲ್ಲರ ಒಲುಮೆಯಿಂದಲೆ ಬಾಳು ಸೊಗಸಾಗಿರಲು
ಪ್ರಕೃತಿಯ ಗಾನ, ಸ್ನೇಹಿತರ ತಾಣ ಎನಲು ತಪ್ಪೇನು?

ಕಷ್ಟ ಕಾರ್ಪಣ್ಯಗಳ ಎದುರಿಸಿ ಬೆಳೆದು ನಿಂತ ಜೀವಗಳು
ಸಾವಿರಾರು ಬಂಧು ಮಿತ್ರರ ಪಡೆದ ಧನ್ಯತಾ ಭಾವನೆಗಳು
ನಿಮ್ಮೊಲುಮೆಯಿಂದ ನಾವ್ ಪಡೆದ ನಗುದಿನಗಳೆಷ್ಟೋ
ನಿಮ್ಮಿಂದ ನಿಮ್ಮ ನಡೆಯಿಂದ ತಣಿದ ದಣಿದ ಮನಗಳೆಷ್ಟೊ

ಕಾರ್ಮೋಡ ಕವಿಯಲಿ ಭೋರ್ಗರೆವ ಮಳೆಸುರಿಯಲಿ
ಹಿಮಪಾತವಾಗಲಿ ಚಂಡಮಾರುತವಿರಲಿ ನೀವು ಕೈಜೋಡಿಸಿದಿರಿ
ಮತ್ತೆ ಮತ್ತೆ ಬರುತಿದ್ದ ಹಿತವಾದ ತಂಗಾಳಿಯಲಿ
ಸೊಗಸಾದ ದಿನಗಳನು ಹಿತವಾಗಿ ಸವಿಯಲು ಜೊತೆಬಂದಿರಿ

ಜೀವನವಿರುವುದು ಬಾಳಿ ಬದುಕಿ ಬಿಡದೆ ಸಂಭ್ರಮಿಸಲು
ಮುದಕೊಡುವ ಮಧುರ ಕ್ಷಣಗಳು ಸವಿಯಾದ ನಡೆ ನುಡಿಗಳು
ಪ್ರಕೃತಿ ಪುರುಷರೆಲ್ಲರಿಗೂ ನನ್ನ ಮನದಾಳದ ಧನ್ಯವಾದಗಳು
ನಿಮ್ಮೆಲ್ಲರ ಒಲುಮೆಗೆ ಇದೋ "ಸಂತೃಪ್ತಿ" ಯ ನಮನಗಳು


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## *"ಹರಕೆಗಳು"*



ಪದ್ಮ ಚಿಕ್ಕೇರೂರ್

ವಸಂತ ಋತುವಿನ ಆಗಮನದಿಂದ ನಿಸರ್ಗವು ಹೊಸ ಚೆಲುವಿನ ಖನಿಯಾಗಿ ಕಂಗೊಳಿಸುತ್ತದೆ "ಋತುನಾಮ್ ಕುಸುಮಾಕರಃ" ಎಂಬ ಕವಿ ವಾಣಿಯಂತೆ ವಸಂತ ಋತು ಸರ್ವರಿಗೂ ಸಂತಸಕಾರಿ. ಈ ಸಂತಸವನ್ನು ಎಲ್ಲರೊಂದಿಗೆ ಹಂಚಿಕೊಳ್ಳಲು ವರ್ಷದ ಮೊದಲ ದಿನವಾದ ಚೈತ್ರ ಶುದ್ಧ ಪ್ರತಿಪದೆಯಂದು ದೇವಸ್ಥಾನಕ್ಕೆ ಹೋಗಿ ಅಲ್ಲಿ ದೇವರ ಸನ್ನಿಧಿಯಲ್ಲಿ -ಆತ್ಮೀಯರೊಂದಿಗೆ ಶುಭಾಶಯವನ್ನು ಹಂಚಿಕೊಳ್ಳುತ್ತಿರುವಾಗ ನನ್ನ ಬಾಲ್ಯದ ಸ್ನೇಹಿತೆ ಕಾವೇರಿಯನ್ನು ಕಂಡಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ಈಗ ಅವಳ ಮಾತಿನಲ್ಲಿದ್ದ ವಿನಯ, ದೇವರಲ್ಲಿ ಅಪಾರ ನಂಬಿಕೆ, ಶ್ರದ್ದೆ-ಭಕ್ತಿ ಕಂಡಾಗ ಆಶ್ಚರ್ಯವಾಯಿತು. ಯುಗಾದಿಯ ಶುಭಾಶಯ ಹಂಚಿಕೊಂಡ ನಂತರ ಮಾತಿಗೆ ಪ್ರಾರಂಭಿಸಿದಳು. ಕೇವಲ ಹತ್ತು ನಿಮಿಷದಲ್ಲಿ ಅವಳ ಮಾತಿನಲ್ಲಿ ಹದಿನೈದಕ್ಕೂ ಹೆಚ್ಚಾಗಿ ಹರಕೆಗೆ ಸಂಬಂಧ ಪಟ್ಟ ಮಾತಾಡಿ, ಕೊನೆಗೆ - "ನೋಡೆ ಸುಮಾ ನಮಗೇನಾದ್ರು ಮನೆ ಕಟ್ಟುವ ಯೋಗ ಕೂಡಿ ಬಂದರೆ, ಶ್ರೀಕಂಠೇಶ್ವರನಿಗೆ ಬೆಳ್ಳಿ ಕಿರೀಟವನ್ನು ಮಾಡಿಸಿ ಕೊಡ್ತೀನಿ, ಹಾಗೆ ನಮ್ಮ ಮನೆಯಲ್ಲಿ ಕಳುವಾಗಿದ್ದ ಪದಾರ್ಥವೆಲ್ಲಾ ವಾಪಸ್ಸು ಸಿಕ್ಕಿದರೆ ಧರ್ಮಸ್ಥಳದ ಮಂಜುನಾಥನಿಗೆ ಒಂದು ದಿನದ ಸರ್ವ ಸೇವೆಯನ್ನು ಮಾಡಿಸಬೇಕಂತ ಇದ್ದೀನಿ. ಅಲ್ಲದೆ ನನ್ನ ಮಗನಿಗೆ ಬೆಂಗಳೂರಿನಲ್ಲಿ ಒಳ್ಳೆ ಕೆಲಸ ಸಿಕ್ಕು ಕೈ ತುಂಬಾ ಸಂಬಳ ಬಂದರೆ, ಮನೆಯವರೆಲ್ಲ ದೇವರಗುಡ್ಡಕ್ಕೆ ಅಲ್ಲಿ ಅನ್ನ ಸಂತರ್ಪಣೆ ಮಾಡಿಸುಬೇಕಂತ ಇದೀವಿ." ಹಾಗೆ-ಹೀಗೆ ಅಂತ ಇನ್ನು ದುಬಾರಿಯ ಸೇವೆಯ ಪಟ್ಟಿ ಹೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಡದೆ, ಪಟ -ಪಟಾಂತ ಅರಳು ಹುರಿದ ಹಾಗೆ ಮಾತಾಡ್ತಾ ಇದ್ದ ಗೆಳತಿಯನ್ನು, ಅವಳ ಹಬ್ಬದ ದಿನದ ಅಲಂಕಾರವನ್ನು ಕಂಡು ಆಶ್ಚರ್ಯ ಪಟ್ಟೆ. ಹಬ್ಬದ ಶುಭಾಶಯ ಹೇಳುತ್ತಲೇ ಅವಳು ದೇವಸ್ಥಾನದ ಜನಗಳ ಗುಂಪಿನಲ್ಲಿ ಮರೆಯಾದಳು. ಅವಳ ವಠಾರದವರು ಇವಳಿಗೆ "ಹರಕೆಯ-ಕಾವೇರಿ" ಅಂತ ಹೆಸರಿಟ್ಟಿದ್ದು ಸರಿಯಾಗಿದೆ ಅನ್ನಿಸಿತು. ಮಾತನಾಡಿಸಿದರೆ ಸಾಕು, ಹರಕೆಯ ದೊಡ್ಡ ಪಟ್ಟಿಯೇ ಅವಳಲ್ಲಿ ಸದಾ ಇರುತ್ತದೆ. ಕಾವೇರಿ ಹೊರಟ ಹೋದಮೇಲೂ, ಅದೇ ಗುಂಗಿನಲ್ಲಿದ್ದ ನನಗೆ ಕೆಲವರು ಆಪ್ತರು, ಹೊಸ ವರ್ಷದ ಶುಭಾಶಯ ತಿಳಿಸುತ್ತ, "ಕಾವೇರಿ ಭೇಟಿ ಆಗಿದ್ಲಾ"? ಎಂದು ಪ್ರಶ್ನಿಸಿ "ಪಂಚಾಂಗ ಶ್ರವಣ ನಡೀತಾ ಇದೆ ಬರೋದಿಲ್ವಾ"? ಬನ್ನಿ.. ಬನ್ನಿ ಎಂದು ಮಂಟಪದತ್ತ ಕರೆದುಕೊಂಡು ಹೋದರು.



ಚಿತ್ರ ಕೃಪೆ : ಅಂತರ್ಜಾಲ

ಈ ಹರಕೆಗಳು ಎಲ್ಲಿಂದ ಪ್ರಾರಂಭವಾಗಿದೆ? ಯಾರು ಕಂಡು ಹಿಡಿದವರು? ಮೊಟ್ಟ ಮೊದಲ ಹರಕೆಯನ್ನು ಮಾಡಿಕೊಂಡವರು ಯಾರು? ಈ ತರಹ ವಿಚಿತ್ರ ರೀತಿಯಲ್ಲಿ ಹರಕೆ ಮಾಡಿಕೊಳ್ಳುವವರ ಬಗ್ಗೆ ಯೋಚಿಸುತ್ತಾ, ಅದೇ ಗುಂಗಿನಲ್ಲಿದ್ದ ನನಗೆ ಸುರುಳಿ-ಸುರಳಿಯಾಗಿ ನೆನಪುಗಳು ಬಂದು, "ಅಬ್ಬಾ!! ಹರಕೆಗಳು ಎಷ್ಟೊಂದು ವಿಧ!, ಸ್ವಾರ್ಥಕ್ಕಾಗಿ ಹರಕೆ, ಮನೆಯವರ ಏಳ್ಗೆಗಾಗಿ ಹರಕೆ, ವಂಶೋದ್ದಾರಕ್ಕಾಗಿ ಹರಕೆ, ಹಿತೈಷಿಗಳಿಗಾಗಿ, ಆರೋಗ್ಯಕ್ಕಾಗಿ, ವಿದ್ಯೆಗಾಗಿ, ರಾಜಕೀಯಕ್ಕಾಗಿ, ಒಂದೇ ... ಎರಡೇ ?

ಕೆಲವರು ಜಾಣತನದಿಂದ, ಖರ್ಚು ಇಲ್ಲದೆ, ಇನ್ನೊಬ್ಬರಿಗೆ ತೊಂದರೆ ಆಗದಂತೆ ಹರಕೆ ಹೊತ್ತರೆ, ಮತ್ತೆ ಕೆಲವರು ನಮ್ಮ ಕಾವೇರಿ ತರಹ ದುಬಾರಿಯ, ಅಸಾಧ್ಯದ ಹರಕೆ ಹೊರವುದುಂಟು. ನೋಡಿ ನಮ್ಮ ಅಕ್ಕನ ಮಗ, ಹೇಳಿ-ಕೇಳಿ ಈಗಿನ ಕಾಲದ ಹುಡುಗ, ಇಂಜಿನಿಯರಿಂಗ್ ವಿದ್ಯಾರ್ಥಿ, ತನ್ನ ಓದಿನಲ್ಲಿ ಅಪಾರ ಶ್ರದ್ದೆ, ಒಳ್ಳೆಯ ನಂಬರ್ ತಗೋತಾನೆ, ಆದರೂ ಅವನಿಗೆ ಏಕೋ ಹರಕೆಯ ಹುಚ್ಚು. ಅವನು "ಈ ಸಲ ಫಸ್ಟ್ ಕ್ಲಾಸ್ನಲ್ಲಿ ಪಾಸಾದರೆ ಬಸವನಗುಡಿಯ ದೊಡ್ಡ ಗಣೇಶನಿಗೆ ಬೆಣ್ಣೆಯ ಅಲಂಕಾರ ಮಾಡಿಸ್ತೀನಿ." ಅಂತ ಹರಕೆ ಮಾಡಿಕೊಂಡಿದ್ದ. ಅವನ ಸ್ನೇಹಿತ "ನನಗೆ ಇಂಟರ್ವ್ಯೂ ನಲ್ಲಿ ಪಾಸಾಗಿ, ಉದ್ಯೋಗ ದೊರೆತರೆ, ಶಿವಗಂಗೆ ಬೆಟ್ಟದ ದೇವರಿಗೆ ಪಂಚಾಮೃತ ಅಭಿಷೇಕ ಮಾಡಿಸ್ತೀನಿ" ಅಂತ ಹರಕೆ ಹೊತ್ತಿದ್ದು ನೋಡಿದರೆ, ಆದುನಿಕ ಕಾಲದ, ಬುದ್ದಿವಂತ ಯುವಕರು ಈ ರೀತಿ ಹರಕೆ ಹೊರುವುದು ಎಷ್ಟರ ಮಟ್ಟಿಗೆ ಸರಿ ಇರಬಹುದು ಎಂದು ಅನ್ನಿಸಿತು.

ಮಕ್ಕಳಿಗಾಗಿ, ಹಿತೈಷಿಗಳಿಗಾಗಿ ಹೊರುವ ಹರಕೆಯದೇ ಮತ್ತೊಂದು ರೂಪ. ಬಂದ ಸಂಬಂಧಗಳನ್ನೆಲಾ ಬೇಡ-ಬೇಡ ಅಂತ ಮದುವೆಯನ್ನೇ ಮುಂದೂಡುತ್ತಿದ್ದ ವಯಸ್ಸಾಗುತ್ತಿರುವ ಮಗನನ್ನು ಕಂಡು ಕಸಿ-ವಿಸಿಗೊಂಡ; ಮುರಳಿಯ ತಾಯಿ "ದೇವರೇ, ಈ ವರ್ಷವಾದರೂ ನಮ್ಮ ಮುರಳಿಗೆ ಮದುವೆಯಾಗಿ, ಮನೆಯಲ್ಲಿ ಶುಭ ಕಾರ್ಯ ನೆಡೆದರೆ, ನಿನಗೆ ಕಲ್ಯಾಣೋತ್ಸವ, ಮಾಡಿಸುತ್ತೇನೆಂದು, ಮನೆದೇವರಾದ ವೆಂಕರರಮಣನಿಗೆ ಹರಕೆ ಹೊತ್ತ ತಾಯಿಯ, ಅಂತಃಕರಣವನ್ನು, ಮತ್ತು ಪಾರ್ಶ್ವ ವಾಯುವಿನಿಂದ ಬಳಲುತ್ತಿದ್ದ ತಾಯಿಯ ದುಃಸ್ಥಿತಿಯನ್ನು ಕಂಡ, ಹಿರಿಮಗನಿಗೆ ಕರಳು ಚುರುಕ್ ಅಂದಿರಬೇಕು, ಅವನು ತಕ್ಷಣ "ಅಮ್ಮನಿಗೆ ನಂಜುಂಡೇಶ್ವರನ ಕೃಪೆಯಿಂದ ಕೈ ಸ್ವಾಧೀನಕ್ಕೆ ಬಂದರೆ, ಬೆಳ್ಳಿ ಕೈ ಒಪ್ಪಿಸೋಣ" - ಅಂತ ಪತ್ನಿಯೊಂದಿಗೆ ತನ್ನ ಅನಿಸಿಕೆಯನ್ನು ಹೇಳಿಗೊಂಡಾಗ, ಆಕೆ ಗಾಬರಿಯಿಂದ ಹೌಹಾರಿ "ಏನುಅಂದ್ರೆ, ಇವತ್ತಿನ ಬೆಳ್ಳಿ ಬೆಲೆಯಲ್ಲಿ ನಿಮ್ಮ ತಾಯಿಯ ಕೈ ಗಾತ್ರದ ಕೈ ಮಾಡಿಸೋಕೆ, ಎಷ್ಟು ಕೆ.ಜಿ ಬೆಳ್ಳಿ ಬೇಕು? ಗೊತ್ತಾ? ಅಂದಿದ್ದಕ್ಕೆ ಮಗ ಶಾಂತವಾಗಿ, ಕೈ ಗಾತ್ರ ಮಾಡಿಸುತ್ತಾರೇನು? ಕ್ಷೇತ್ರಗಳಲ್ಲಿ ಕಣ್ಣು-ಕಿವಿ, ನಾಲಿಗೆ, ಕಾಲು, ಕೈ, ಅಂತ ಒಂದು ರೂಪಾಯಿಗೆ ಮಾರೋದಿಲ್ವೇ? ಅದನ್ನು ತೆಗದು ಹಾಕೋಣ" ಅಂತ ಅಂದಿದ್ದನ್ನು ಕೇಳಿ ಸೊಸೆ "ಸದ್ಯ" ಅಂತ ಹಿಡಿದಿದ್ದ ಉಸಿರನ್ನು ನಿಧಾನವಾಗಿ ಬಿಟ್ಟಳು.

ಹರಕೆಗಳಲ್ಲಿ ದುಬಾರಿಯ ಹರಕೆಗಳು ಉಂಟು. ಅವುಗಳಲ್ಲಿ ಮಧುರೆ ಮೀನಾಕ್ಷಿಗೆ ವಜ್ರದ ಮೂಗುತಿ, ಕಾಶಿವಿಶಾಲಾಕ್ಷಿಗೆ ಪೀತಾಂಬರ, ಅನ್ನಪೂರ್ಣೆಗೆ ಚಿನ್ನದ ಸೌಟು. ತಿರುಪತಿ-ತಿಮ್ಮಪ್ಪನಿಗೆ ಕಂಠೀಹಾರ, ದೇವಾಲಯಕ್ಕೆ ಕಲಶ ಇನ್ನು ಮುಂತಾದ ಹರಕೆ ಒಪ್ಪಿಸುವ ಶ್ರೀಮಂತರು ಇದ್ದಾರೆ. ಹರಕೆಗೆ ಹನ್ನೆರಡು ವರ್ಷ ಅಂತಾರೆ ನಿಜ ಅದಕ್ಕೂ ಕಾಲ ಮಿತಿ ಇದೆ , ದೇವರು ನಮ್ಮ ಶ್ರದ್ದೆಯನ್ನು ಪರೀಕ್ಷಿಸಲು, ಸಾಕಷ್ಟು ಕಾಲಾವಕಾಶ ಕರುಣಿಸಿದ್ದಾನೆ.

ಇದೊಂದು ಧರ್ಮ ಪರೀಕ್ಷೆಯ ಹರಕೆ ಅನ್ನಬಹುದು, ಊರಿನ ಕ್ಷೇಮಕ್ಕಾಗಿ, ಪುರಜನರೆಲ್ಲಾ ಸೇರಿ ಸಾಮೂಹಿಕವಾಗಿ ಮಾಡಿದ ಧಾರ್ಮಿಕ ಕಾರ್ಯಕ್ರಮ. ಒಮ್ಮೆ ನಮ್ಮೊರಿನಲ್ಲಿ ಮಳೆ ಬಾರದೆ ಹಾಹಾಕಾರ ಪಡುವಂತಾಗಿತ್ತು. ಶಿವನನ್ನು ಜಲವಾಸದಲ್ಲಿರಿಸಿ ಸೇವೆ ಮಾಡಿದರೆ ಮಳೆಯಾಗುವ ಸಂಭವವಿದೆ ಎಂದು ಪ್ರಾಜ್ಞರು ತಿಳಿಸಿದರು. ಎಲ್ಲರು ಶ್ರದ್ದೆ ಭಕ್ತಿಯಿಂದ ಈ ಕೈಂಕರ್ಯ ಮಾಡಿ ದೇವಾಲಯದ ಆವರಣದಲ್ಲಿ ಬ್ರಾಹ್ಮಣರು, ಘನಪಾಠಿಗಳು ಸಾಮೂಹಿಕವಾಗಿ ವರುಣನನ್ನು ಕುರಿತು ಮಂತ್ರ ಘೋಷವನ್ನು ತಾರಕ ಸ್ಥಾಯಿಯಲ್ಲಿ ಮಾಡುತ್ತಾ ಮುಗಿಲಿನತ್ತ ವೀಕ್ಷಿಸುತ್ತಿದ್ದರು. ತಕ್ಷಣವೇ ಗಾಳಿ-ಮೋಡಗಳಿಂದ ಆವೃತವಾಗಿ ಧಾರಾಕಾರ ಮಳೆಯಾಗಿ - ಎಲ್ಲೆಲ್ಲೂ ತಂಪಾಗಿ ಚೇತೋಹಾರಿಯಾಯಿತು.

ಕೋಗಿಲೆಗಳ ಕೂಜನ, ದುಂಭಿಗಳ ಝೇಂಕಾರ , ತರುಲತೆಗಳ ನಿನಾದವಾಗಿ ಎಲ್ಲೆಲ್ಲೂ ಸಂಭ್ರಮವೋ ಸಂಭ್ರಮ. "ಯುಗಾದಿ-ಹಬ್ಬ" ಇಂತಹ ಚೆಲುವಿನ ವಾತಾವರಣದಲ್ಲಿ ವಸಂತನ ಆಗಮನ, ಅದೇ ವರ್ಷಾರಂಭ. ●


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಕಿಶೋರ ವಾಣಿ

### *"ಹೊಸ ಶಾಲೆಗೆ ಹೊರಟಾನ ಬನ್ನಿ"*




ಸುದೀಪ್ತ ಮೂರ್ತಿ
ಈಸ್ಟ್ ವಿಂಡ್ಸರ್ ಕನ್ನಡ ಶಾಲೆ

"ನನ್ನ ಪ್ರೀತಿಯ ಅಜ್ಜ ಮತ್ತು ಅಜ್ಜಿ ಹೇಗಿದ್ದೀರಾ ?..." ಇದು ನಾನು ಇತ್ತೀಚೆಗೆ ನನ್ನ ಅಜ್ಜ ಮತ್ತು ಅಜ್ಜಿಯವರಿಗೆ ಬರೆದ ಕಾಗದದ ಮೊದಲ ಸಾಲು. ನನ್ನ ಕನ್ನಡದ ಕಾಗದ ಓದಿದ ಮೇಲೆ ಅಜ್ಜನಿಗೆ ಖುಷಿಯಾದ ಕಣ್ಣೀರು ಮತ್ತು ಅಜ್ಜಿಯವರಿಗೆ ಹೆಮ್ಮೆ. ಅಮೇರಿಕಾದಲ್ಲಿ ಓದುತ್ತಿರುವ ನನಗೆ, ಕನ್ನಡದಲ್ಲಿ ಕಾಗದ ಬರೆಯುವುದು ಹೇಗೆ ಸಾಧ್ಯ? ಇದು ಸಾಧ್ಯ ಆಗಿದ್ದು ಎರಡು ವರ್ಷದ ಹಿಂದೆ ನಾನು ಕನ್ನಡ ಶಾಲೆಗೆ ಸೇರಿ, ನನ್ನ ಗುರುಗಳಾದ ಅನಿಲ್ ಅವರ ಪಾಠದಿಂದ.

ಎಲ್ಲ ಶನಿವಾರದಲ್ಲಿ ನಾನು ಕನ್ನಡ ಶಾಲೆಗೆ ಹೋಗ್ತೀನಿ. ಶಾಲೆಗೆ ಹೋಗೋಕೆ ನನ್ನ ಅಮ್ಮ, ಅಪ್ಪ force ಮಾಡಲ್ಲ. ನಾನೇ ಹೋಗಬೇಕು ಅಂತೀನಿ. ಶಾಲೆಗೆ ಬಂದ ಮೇಲೆ, ಪ್ರಾರ್ಥನೆ ಮತ್ತು ಹಾಡು ಹಾಡ್ತೀವಿ. "ಕನ್ನಡದ ಕುಲದೇವಿ" ನಮ್ಮ ಸಂಕೇತ ಗೀತೆ. ಅದಾದ ಮೇಲೆ, ನಾವು ನಮ್ಮ ಗುರುಗಳ ಬಳಿ ಹೋಗ್ತೀವಿ. ಕಾಗುಣಿತ warm up ಮಾಡ್ತೀವಿ. ನಂತರ ಆ ದಿನದ ಪಾಠ ಓದುತ್ತೇವೆ. ಪ್ರತೀ ಸಲ ಹೊಸ ಪಾಠ ಕಲಿಯುತ್ತೇವೆ.

ಕನ್ನಡ ಶಾಲೆಯಲ್ಲಿ ನನಗೆ ಒಂದು ಇಷ್ಟವಾದ ಚಟುವಟಿಕೆ ಇದೆ. ಅದು ನಾಟಕ ಮಾಡುವುದು. "ಬೃಂದಾವನ ಕನ್ನಡ ಕೂಟ"ದ ಯಾವುದಾದರು Special event ಇದ್ರೆ, ನಮ್ಮ ಕನ್ನಡ ಶಾಲೆಯ ಎಲ್ಲಾ ಮಕ್ಕಳು ಸೇರಿ ನಾಟಕ ಮಾಡುತ್ತೇವೆ. ನಮ್ಮ ಮೊದಲ ನಾಟಕ "ಜ್ಞಾನಪೀಠ ವೈಭವ". ಎಲ್ಲ ಜ್ಞಾನಪೀಠ ಪ್ರಶಸ್ತಿ ಪಡೆದವರನ್ನು ಪರಿಚಯಿಸಿ ಹಾಡು, ನೃತ್ಯ ರೂಪಕ ಮಾಡಿದ್ದು. ಕೊನೆಯ ನೃತ್ಯ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ "ಬಂಗಾರ ನೀರ". ಇದು ನನಗೆ ತುಂಬಾ ಇಷ್ಟವಾದ ಹಾಡು. ಈ ಹಾಡಿನಲ್ಲಿ ಒಂದು ಚೆನ್ನಾಗಿರುವ ಸಾಲು ಇದೆ. ಆ ಸಾಲು ಹೀಗೆ ಇದೆ, "ಹೊಸ ದ್ವೀಪಗಳಿಗೆ ಹೊರಟಾನ ಬನ್ನಿ, ಅಂದದೋ ಅಂದದ". ಕನ್ನಡ ಶಾಲೆಗೆ ಹೋಗುವ ಮೊದಲು ನಾನು ಇನ್ನೊಂದು ದ್ವೀಪದಲ್ಲಿದ್ದೆ. ಈಗ ನಾನು ಶಾಲೆಗೆ ಹೋಗ್ತೀನಿ. ಕನ್ನಡ ಶಾಲೆ ನನ್ನ ಹೊಸ ದ್ವೀಪ. ಶಾಲೆಗೆ ಹೋದಮೇಲೆ ನನ್ನ ಕನ್ನಡ ಪ್ರಯಾಣ ಶುರುವಾಯ್ತು. ತಡ ಆಯ್ತು. ಬನ್ನಿ, ಹೊಸ ಶಾಲೆಗೆ ಹೋಗೋಣ. ●




ಸಾರ್ಥಕ್ ರಾವ್, ಸೌತ್ ಬ್ರುನ್ಸ್ವಿಕ್ ಕನ್ನಡ ಶಾಲೆ

### *"ನನ್ನ ಕನ್ನಡ ಶಾಲೆ"*



ಸಂಕೀರ್ತ್ ಭರದ್ವಾಜ
ಈಸ್ಟ್ ವಿಂಡ್ಸರ್ ಕನ್ನಡ ಶಾಲೆ

**ನಾ**ನು ಎರಡು ವರ್ಷದ ಹಿಂದೆ ಕನ್ನಡ ಶಾಲೆಗೆ ಹೋಗಲು ಶುರುಮಾಡಿದಾಗ ನನಗೆ ಸ್ವಲ್ಪ ಕನ್ನಡ ಬರುತಿತ್ತು. ಮೊದಲನೆ ದಿನವೇ ನಾನು ಬೇರೆ ವಿದ್ಯಾರ್ಥಿಗಳ ಜೊತೆ ಚೆನ್ನಾಗಿ ಸೇರಿಕೊಂಡೆ, ಯಾಕೆಂದರೆ ನನ್ನ ಅಮ್ಮನಿಗೆ ಜಾಸ್ತಿ ಗೆಳತಿಯರು ಇದ್ದರು. ಆ ದಿನ ನಾನು ಪರೀಕ್ಷೆ ತೊಗೊಂಡೆ. ನಾನು ಸ್ವರ ಭಲ್ಲಾ 1 ನಲ್ಲಿ ಇದ್ದೆ. ಮುಂದಿನ ವಾರದಿಂದ ನಾನು ನಿಯಮಿತವಾಗಿ ಕಲಿತೆ.

ಒಂದೆರಡು ತಿಂಗಳಾದ ಮೇಲೆ ನಾಟಕ ಮಾಡುವ ಅವಕಾಶ ಸಿಕ್ಕಿತು. ಆ ದಿನ "ಜ್ಞಾನ ಪೀಠ ವೈಭವ" ನಾಟಕದಲ್ಲಿ ನಾನು ಶಿವರಾಂ ಕಾರಂತರ ಬಗ್ಗೆ ಹೇಳಿದೆ. ಮುಂದಿನ ಸಲ" ಅಳುವುದೋ ನಗುವುದೋ" ನಾಟಕದಲ್ಲಿ ನಾನು ರಾಜನಾಗಿ ನಟಿಸಿದೆ. ಈ ಸಲದ ಮಕ್ಕಳ ದಿನಾಚರಣೆಯ ಸಮಯದಲ್ಲಿ "ಕರುನಾಡ ತಾಯಿ ಸದಾ ಚಿನ್ಮಯಿ" ನಾಟಕದಲ್ಲಿ ನನಗೆ ಹಾಡುವ ಮತ್ತು ನಟಿಸುವ ಅವಕಾಶ ಸಿಕ್ಕಿತು. ನಾಟಕಗಳಿಂದ ಕನ್ನಡ ಇತಿಹಾಸ ಹಾಗು ಸಂಸ್ಕೃತಿ ತಿಳಿಯುತ್ತಿದ್ದೇನೆ. ಅದಕ್ಕೆ ನನಗೆ ಕನ್ನಡ ಶಾಲೆ ಇಷ್ಟ. ನನಗೆ ಅವಕಾಶ ಕೊಟ್ಟ ಈಸ್ಟ್ ವಿಂಡ್ಸರ್ ಕನ್ನಡ ಶಾಲೆಯ ಶಿಕ್ಷಕರಿಗೆ ನನ್ನ ಧನ್ಯವಾದಗಳು.

●

*" ಈ ಮಕ್ಕಳ ಬರವಣಿಗೆಗಳು ಮತ್ತು ಚಿತ್ರಗಳು ನಮ್ಮ ಬೃಂದಾವನ ವಾಣಿ ಸಂಚಿಗಳಲ್ಲಿ ಪ್ರಕಟಿತವಾಗುವುದು ಒಂದು ಸಂತಸಕರ ಹಾಗೂ ಶ್ಲಾಘನೀಯ ಸಂಗತಿ. ಇನ್ನೂ ಹೆಚ್ಚು ಮಕ್ಕಳು ಅವರ ಭಾವನೆಗಳನ್ನು ಬರಹ ರೂಪಕ್ಕೆ ತರಲಿ ಮತ್ತು ತಮ್ಮದೇ ಆದ ಶೈಲಿಯಲ್ಲಿ ಬರೆದ ಎಲ್ಲಾ ಪುಟಾಣಿಗಳಿಗೂ ಒಂದು ಚಪ್ಪಾಳೆ ಬರಲಿ ಎಂದು ಓದುಗರಲ್ಲಿ ಸವಿನಯ ಪ್ರಾರ್ಥನೆ." ...ಸಂಪಾದಕ ವರ್ಗ.*


Copyright © KCO – Brindavana

ಸಂಚಿಕೆ
೧೫
ಮಾರ್ಚ್, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಸವಿ ರುಚಿ

### "ವ್ಯಾಲೆಂಟೈನ್ ದಿನದ ಸ್ಪೆಷಲ್"



ಎಲ್ಲರಿಗೂ ನಮಸ್ಕಾರ. ನಾನು ಈಸ್ಟ್ ವಿಂಡ್ಸರ್ ಕನ್ನಡ ಶಾಲೆಯ ರಚನಾ ಆಚಾರ್ಯ. ನನಗೆ ಬೇರೆ ಬೇರೆ ಕೇಕ್, ಕುಕ್ಕಿ, ಸ್ಯಾಂಡ್ವಿಚ್ ಮಾಡೋದು ಇಷ್ಟ. ಈಗಷ್ಟೇ ವ್ಯಾಲೆಂಟೈನ್ ದಿನ ಇತ್ತು. ನಾನು ಅದಕ್ಕೆ, ಹಾರ್ಟ್ ಆಕಾರದಲ್ಲಿ ತಿಂಡಿ ಮಾಡಿದೆ. ನನ್ನ ಮನೆಯಲ್ಲಿ ಎಲ್ಲರಿಗೆ ಇಷ್ಟ ಆಯ್ತು. ರೆಸಿಪಿ ಶೇರ್ ಮಾಡ್ತಿದ್ದೇನೆ. ನೀವೂ ಮಾಡಿ ನೋಡಿ.

**1.ಕರ್ಜೂರ (ಡೇಟ್) ಕೇಕ್**



ಒವೆನ್-ಅನ್ನು 350°F ಗೆ ಬಿಸಿ ಮಾಡಿ.

ಈಗ ಒಂದು 10 × 6 ಟ್ರೇ-ಯಲ್ಲಿ,

1. 18 ಕರ್ಜೂರ ತುಂಡುಗಳನ್ನು ಕತ್ತರಿಸಿ.
2. 3/4 ಕಪ್ ಬಿಸಿ ಹಾಲು ಬೆರೆಸಿ.
3. 1 ಕಪ್ ಮೈದಾ(all purpose flour) ಬೆರೆಸಿ .
4. 1/2 ಕಪ್ ಸಕ್ಕರೆ ಬೆರೆಸಿ.
5. 1 ಟೀಚಮಚ್ ಬೇಕಿಂಗ್ ಸೋಡ ಬೆರೆಸಿ.
6. ಟ್ರೇ-ಅನ್ನು ಒವೆನ್ ಒಳಗೆ ಇಟ್ಟು 30 ನಿಮಿಷ ಬೇಕ್ ಮಾಡಿ.
7. ಒವೆನ್-ನಿಂದ ಹೊರಗೆ ತೆಗೆದು ತಣ್ಣಗೆ ಮಾಡಿ, ತುಂಡು ಮಾಡಿ ತಿನ್ನಿ.

**2.ವ್ಯಾಲೆಂಟೈನ್ ಹಾರ್ಟ್**



ಒವೆನ್ - ಅನ್ನು 350°F ಗೆ ಬಿಸಿ ಮಾಡಿ.

1. 2 -8 ಔನ್ಸ್ ಪಿಲ್ಸ್ಬರಿ ಕ್ರೋಸಾಂಟ್ ರೋಲ್ಸ್-ಗಳನ್ನು ಫ್ರೀಝರ್ -ನಿಂದ ಹೊರಗೆ ತೆಗಿರಿ.

2. ಒಂದು ರೋಲನ್ನು ಬೇಕಿಂಗ್ ಟ್ರೇಯಲ್ಲಿ ಹರಡಿ. ಒಂದು ದೊಡ್ಡ ಹಾರ್ಟ್ ಆಕಾರದಲ್ಲಿ ತುಂಡು ಮಾಡಿ.

3.ಇದರ ಮೇಲೆ, *** ಪಾಲಕ್-ಡಿಪ್ಪನ್ನು ಹರಡಿ.

4.ಅದರ ಮೇಲೆ ಪಾರ್ಮೆಶಾನ್ ಚೀಜ್ ಹಾಕಿ.

5.ಈಗ ಇನ್ನೊಂದು ಕ್ರೊಸಾನ್ಟ್ ರೋಲನ್ನು, ಹಾರ್ಟ್ ಆಕಾರದಲ್ಲಿ ತುಂಡು ಮಾಡಿ, ಮೊದಲಿನ ಕ್ರೊಸಾನ್ಟ್ ಹಾರ್ಟ್ ಮೇಲೆ ಹಾಕಿ.

6. ಈಗ ಉಳಿದ ತುಂಡುಗಳನ್ನು, ಉಳಿದ ಪಾಲಕ್ ಡಿಪ್ ಒಟ್ಟಿಗೆ ಬೆರೆಸಿ ಅದನ್ನು ಜಡೆಯ ಆಕಾರದಲ್ಲಿ ತಿರುಗಿಸಿ, ಈ ಹಾರ್ಟಿನ ಹೊರಗೆ ಜೋಡಿಸಿ.

7.ಈಗ ಟ್ರೇಯನ್ನು ಒವೆನ್ನಲ್ಲಿ ಹಾಕಿ 20 ನಿಮಿಷ ಬೇಕ್ ಮಾಡಿ.

***ಪಾಲಕ್ ಡಿಪ್ ರೆಸಿಪಿ ಹೇಗೆ ಮಾಡುದು?

1. 1 1/2 ಕಪ್ ಪಾಲಕ್ ಸೊಪ್ಪು, ತೊಳಿರಿ.
2. ಒಂದು ಪಾತ್ರೆಯನ್ನು ಸ್ಟೋವ್ ಮೇಲೆ ಇಟ್ಟು, 1 ಟೀಚಮಚ ಎಣ್ಣೆ ಬಿಸಿ ಮಾಡಿ.
3.ಅದಕ್ಕೆ, 1 ಬೆಲ್ ಪೆಪ್ಪೆರನ್ನು ತುಂಡು ಮಾಡಿ ಹಾಕಿ. ಮತ್ತು ಪಾಲಕ್ಕನ್ನು ಬೆರೆಸಿ;1 ಟೀಚಮಚ ಉಪ್ಪು ಮತ್ತು ಕರಿಮೆಣಸು ಹಾಕಿ, ಸೌಂಟಲ್ಲಿ ಬೆರೆಸಿ ( stir-fry, mix).
4. ಅದು ತಣ್ಣಗೆ ಆದ ಮೇಲೆ, ಅದಕ್ಕೆ, 4 ಔನ್ಸ್ ಫಿಲೇಡೆಲ್ಫಿಯ ಕ್ರೀಮ್ ಚೀಜ್ ಬೆರೆಸಿ.
5. 1/4 ಕಪ್ ಸವರ್ ಕ್ರೀಮ್ ಬೆರೆಸಿ.

ಪಾಲಕ್ ಡಿಪ್ ತಯಾರ್.

"ನಿಮ್ಮ ಹಾರ್ಟ್ ಅನ್ನು ಫಾಲೋ ಮಾಡಿ; ಈ ಎರಡು ರೆಸಿಪಿ ಟ್ರೈ ಮಾಡಿ ".

### "ಎಳ್ಳು ಹೋಳಿಗೆ ರೋಲ್ "



ಲಕ್ಷ್ಮಿ ಕೊಲಾಲ್

ಸರ್ವರಿಗೂ ಯುಗಾದಿ ಹಬ್ಬದ ಶುಭಾಶಯಗಳು

ಹಬ್ಬದ ಅಡುಗೆ ಯಾವಾಗಲೂ ಭರ್ಜರಿಯಾಗಿರುವುದು. ಒಮ್ಮೊಮ್ಮೆ ರುಚಿಯಾಗಿ ಮತ್ತು ಸುಲಭವಾಗಿ ತಯಾರಿಸಬಹುದಾದ ತಿನಿಸುಗಳು ಬೇಕೆನಿಸುವುದು ಸಹಜ. ಹಾಗಾಗಿ ಈ ಬಗೆಯನ್ನು ತಯಾರಿಸಿ ನೋಡಿ ಪ್ರೀತಿಯ ಓದುಗರೇ..

ಬೇಕಾಗುವ ಸಾಮಗ್ರಿಗಳು

೧ . ಒಂದು ಬಟ್ಟಲು ಬೆಲ್ಲದ ಪುಡಿ

೨ .ಅರ್ಧ ಬಟ್ಟಲು ಎಳ್ಳು

೩ . ಒಂದು ಚಮಚ ಏಲಕ್ಕಿ ಪುಡಿ

೪ .ಮೊದಲೇ ತಯಾರಿಸಿದ ಗೋಧಿ ಹಿಟ್ಟಿನ ಚಪಾತಿಗಳು

ಮಾಡುವ ವಿಧಾನ

ಒಂದು ಬಾಣಲೆಯಲ್ಲಿ ಎಳ್ಳನ್ನು ಹೊಗೆ ಬರುವ ತನಕ ಚೆನ್ನಾಗಿ ಹುರಿದು ತಣ್ಣಗಾದ ನಂತರ ಪುಡಿಮಾಡಿ ಕೊಳ್ಳಿ. ಆ ನಂತರ ಮೊದಲೇ ಪುಡಿಯಾಗಿರುವ ಬೆಲ್ಲವನೂ ಏಲಕ್ಕಿ ಪುಡಿಯನ್ನು ಸೇರಿಸಿ ಚೆನ್ನಾಗಿ ಕಲಸಿ ಮಿಶ್ರಣವನ್ನು(ಹೂರಣ) ತಯಾರಿಸಬೇಕು. ಆಮೇಲೆ ಒಂದು ಚಪಾತಿಯ ಮೇಲೆ ಸಮವಾಗಿ ಹರಡಿ ಇನ್ನೊಂದು ಚಪಾತಿಯನ್ನು ಅದರ ಮೇಲೆ ಹಾಕಬೇಕು.ಅದನ್ನು ಭದ್ರವಾಗಿ ರೋಲ್ ಮಾಡಿದರೆ. ಎಳ್ಳು ಹೋಳಿಗೆ ರೋಲ್ ತಯಾರು. ಇದನ್ನು ಬಿಸಿಯಾದ ಹಾಲು ಅಥವಾ ತುಪ್ಪದೊಂದಿಗೆ ಸೇವಿಸಿದರೆ ಬಲು ರುಚಿ.

### "ಉಗಾದಿ ಪಚಡಿ"



ಬಿಂದುಮಾಧವಿ ಪಾಲಾಕ್ಷಪ್ಪ

ನಾನು ಹೈದರಾಬಾದಿನಲ್ಲಿ ವಾಸಿಸುತಿದ್ದಾಗ ಮೊದಲನೇ ವರ್ಷ ಪ್ರತಿ ಹಬ್ಬ ಬಂದಾಗಲೂ ಒಂದೊಂದು ಹೊಸ ಅನುಭವ. ಬಹುಶಃ ನಾನು ಅದರ ಬಗ್ಗೆಯೇ ಒಂದು ಲೇಖನವನ್ನು ಬರೆಯಬಹುದು. ಆದರೆ ಈಗ ಯುಗಾದಿ ಹಬ್ಬ ಬರುತ್ತಿದೆ. ಅದಕ್ಕೆ ಯುಗಾದಿಯಂದು ನಾನು ಬೇವು ಬೆಲ್ಲ ಹಂಚಿದಾಗ ನನ್ನ ಅಕ್ಕಪಕ್ಕದ ಮನೆಯವರು ನನಗೆ ಕೊಟ್ಟ ಉಗಾದಿ ಪಚಡಿಯ ರುಚಿಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ಈ ಬಾರಿ ಯುಗಾದಿಗೆ ನೀವೂ ಇದನ್ನು ಮಾಡಿ

ಬೇಕಾಗುವ ಪದಾರ್ಥಗಳು ಇಂತಿವೆ

ಸಣ್ಣಗೆ ಹೆಚ್ಚಿದ ಮಾವಿನಕಾಯಿ - ೧ ಬಟ್ಟಲು

- ಹುಣಸೆ ರಸ - ೧ ಬಟ್ಟಲು
- ಬೆಲ್ಲದ ತುರಿ - ೧/೪ ಬಟ್ಟಲು
- ಬೇವಿನ ಹೂ - ೧/೪ ಬಟ್ಟಲು
- ಉಪ್ಪು - ೧ ಚಮಚ
- ಖಾರದ ಪುಡಿ - ೧ ಚಮಚ

ಈ ಎಲ್ಲಾ ಪದಾರ್ಥಗಳನ್ನೂ ಒಂದು ಬಟ್ಟಲಿಗೆ ಹಾಕಿ ಚೆನ್ನಾಗಿ ಕಲಸಿದರೆ ಷಡ್ರಸಯುಕ್ತ ಉಗಾದಿ ಪಚಡಿ ಸವಿಯಲು ಸಿದ್ಧ . ಇದನ್ನು ದೇವರಿಗೆ ನೈವೇದ್ಯ ಮಾಡಿ ಎಲ್ಲರಿಗೂ ಹಂಚಿ. ನಿಮಗೆಲ್ಲರಿಗೂ ಯುಗಾದಿ ಹಬ್ಬದ ಶುಭಾಶಯಗಳು.


Copyright © KCO – Brindavana

ಸಂಚಿಕೆ
೧೫
ಮಾರ್ಚ್, ೨೦೧೮



## "ಕನಸು"



ಉಷಾ ಬಸ್ರೂರು

**ಈ** ಬದುಕು ಕ್ಷಣಿಕ, ಬದುಕಿರುವ ಅಲ್ಪ ಕಾಲದಲ್ಲಿ ಕುಶಿಯಾಗಿರಬೇಕೆಂದು ಎಲ್ಲರೂ ಕನಸು ಕಾಣುತ್ತಿರುತ್ತಾರೆ! ಸದ್ಗುರು ಹೇಳಿದಂತೆ, ಎಲ್ಲರೂ ಅವರವರ ಬದುಕನ್ನು ಬಣ್ಣ ಬಣ್ಣದ ಚಿತ್ರದಂತೆ ಬಿಡಿಸಿಕೊಳ್ಳಬೇಕು, ಚಲನಚಿತ್ರದಂತೆ ಕಲ್ಪಿಸಿಕೊಂಡು ನಿರ್ದೇಶಿಸಬೇಕು. ಅದು ಹಾಸ್ಯವೋ, ಸಲ್ಲಾಪವೋ, ಕ್ರೌರ್ಯವೋ ಅವರಿಗೆ ಬೇಕಾದಂತೆ ನಿರ್ಧರಿಸಿ, ನಿರ್ದೇಶಿಸಬೇಕು. ಅದಕ್ಕೆ ಬೇಕಾದಂತಹ ಸಂದರ್ಭಗಳನ್ನು ರಚಿಸಿಕೊಂಡು ಜೀವನವನ್ನು ನಡೆಸಿಕೊಂಡು ಹೋಗಬೇಕು. ನೀನೇ ನಿನ್ನ ಜೀವನದ ಕರ್ತೃ!! ನಿನ್ನ ಜೀವನದ ಸುಖ, ದುಃಖಕ್ಕೆ ನೀನೇ ಹೊಣೆ..




ಹೀಗೇ,ಚಿಕ್ಕವರಿರುವಾಗಲೇ ಜೀವನವನ್ನು ಸುಖಮಯವಾಗಿಡಲು ಕನಸು ಕಾಣಲು ಆರಂಭಿಸುತ್ತೇವೆ! ಮುಂದೆ ಓದು ಮುಗಿಸಿದ ನಂತರ ದೊಡ್ಡ ಹುದ್ದೆಗೆ ಸೇರಿ, ಕೈತುಂಬಾ ಹಣ ಗಳಿಸಿ, ಈಗ ಯಾವುದಕ್ಕೆ ಹಂಬಲಿಸಿ ಪಡೆಯಲು ಸಾಧ್ಯವಾಗಿಲ್ಲವೋ ಅದನ್ನೆಲ್ಲ ಗಳಿಸುವ ಆಸೆ. ಅದಕ್ಕೆ ಆಗಿಂದಲೇ ತಯಾರಿ (ಕನಸುಗಳ ಕಟ್ಟಡ ಕಟ್ಟಲು)! ಕೆಲವೊಮ್ಮೆ ಬರೀ ಕನಸು ಕಾಣೋದ್ರಲ್ಲೇ ಕಾಲ ಕಳೆದು, ನಿರೀಕ್ಷೆಗಿಂತ ಕಡಿಮೆ ಅಂಕ ಬಂದಾಗಲೇ ಜ್ಞಾನೋದಯ ಆಗೋದು, ಈ ತರ ಬರೀ ಕನಸು ಕಾಣೋದ್ರಿಂದ ಗುರಿ ತಲುಪಲು ಸಾಧ್ಯವಿಲ್ಲ, ಸತತ ಶ್ರಮ ಪಡಬೇಕು ಅಂತ! ಆದರೆ ಈ 'ಜ್ಞಾನ' ಹೆಚ್ಚು ಸಮಯ ನೆನಪಲ್ಲಿ ಉಳಿಯಲ್ಲ, ಪುನಃ ಇನ್ನೊಂದು ಕನಸಿನತ್ತ ದಾಪುಗಾಲು ಹಾಕಲು ಪ್ರಾರಂಭ!

ಒಂದೊಂದು ಹಂತದಲ್ಲಿ ಒಂದೊಂದು ತೆರನಾದ ಕನಸು, ಆಸೆ...ಎಲ್ಲರಿಂದಲೂ ಸೈ ಎನ್ನಿಸಿಕೊಳ್ಳಬೇಕು, ಸಹಪಾಠಿಗಳಿಂದ ಗುರುಗಳವರೆಗೂ ಎಲ್ಲರೂ ನಮ್ಮನ್ನು ಗುರ್ತಿಸಬೇಕು, ಅದಕ್ಕಾಗಿ ಎಲ್ಲದರಲ್ಲಿಯೂ ಮುನ್ನುಗ್ಗುವುದು, ವಿಷಯದ ತಲೆ - ಬುಡ ಗೊತ್ತಿಲ್ಲದೆಯೂ ಅದರಲ್ಲಿ ಧುಮುಕುವುದು, ಅಭಿನಯದ ಗಂಧ ಗಾಳಿ ಇಲ್ಲದೆಯೇ ವೇದಿಕೆ ಏರಿ, ಗಂಭೀರವಾದ ಮಾತುಕತೆ ನಡೆಸುತ್ತಿದ್ದಾಗ ಎದುರಿನಲ್ಲಿ ಕುಳಿತವರು ಗೊಳ್ಳೆಂದು ನಕ್ಕಾಗಲೇ ಅರಿವಾಗುವುದು ನಮ್ಮ ಬಂಡವಾಳ!!.

## ಕವನ



ಶ್ರೀವಿದ್ಯಾ ಪ್ರಶಾಂತ್



ಬಾಳೆಂಬ ಹೂ-ದೋಟದಲಿ
ಹಂಬಲವೆಂಬ ಎಳೆಗಳ ಹಿಡಿದು
ಕನಸುಗಳೆಂಬ ಹಲಗೆಯ ಮೇಲೆ
ತೇಲುತಿಹ ಮನಸೇ ಜೋಕಾಲಿ...

ಸುಖ-ದು:ಖಗಳ ಒಡಲಲ್ಲಿ
ಜನನ-ಮರಣಗಳೆಂಬ ಪಾಶವ ಪಿಡಿದು
ಸೋಲು-ಗೆಲುವುಗಳ ಎಲ್ಲೆಯ ಮೀರಿ
ಮುನ್ನಡೆಯುತಿದೆ ಜೀವನ ಜೋಕಾಲಿ...

ಬಾಲ್ಯ-ಹರೆಯವ ತಳೆದು
ಭಾವ-ಬಂಧವ ಬೆಸೆದು
ಸರಸ-ವಿರಸಗಳ ಪೊರೆದು
ಸಾಗುತಿದೆ ಒಲುಮೆಯ ಜೋಕಾಲಿ...

ಇರುಳು-ಬೆಳಕಿನ ನಡುವೆ
ಬರಡು-ಬವಣೆಯ ನೀಗಿ
ನಿನ್ನೆ-ನಾಳೆಯ ಪುಟದಿ
ಚಿರ-ಚೇತನವಾಗಿ ನೆಲೆಸೋ
ಬದುಕೇ ಜೋಕಾಲಿ...

ಆದರೂ ಎದೆ ಬಿಡದ ಪ್ರಯತ್ನ ಎಲ್ಲರ ಗಮನ ಸೆಳೆಯಲು, ಎಲ್ಲರ ಮುಂದೆ ನಿಂತು ಅಧಿಕಾರ ಚಲಾಯಿಸುವ ಮುಂದಾಳು ಆಗುವ ಹಂಬಲ. ಕನಸಿನ ಹಿಂದೆ ಮತ್ತೆ ಓಟ.

ತರಗತಿಯಲ್ಲಿ ಇಂದು ಮಾಡುವ ಪಾಠಕ್ಕೆ ಹಿಂದಿನ ದಿನವೇ ಸಕಲ ತಯಾರಿ, ಗುರುಗಳ ಪ್ರಶ್ನೆಗಳಿಗೆ ಉತ್ತರಿಸಲು ಸಿದ್ಧ, ಒಮ್ಮೊಮ್ಮೆ ಗೊತ್ತಿರದದ್ದಕ್ಕೂ ಕೈ ಎತ್ತಿ ತಾನು ಚುರುಕು ಎಂದು ತೋರಿಸಿಕೊಳ್ಳುವ ಆಸೆ, ಗುರುಗಳೊಂದಿಗೆ ಸ್ನೇಹಿತರಿಂದಲೂ ಭೇಷ್! (ಗುರುಗಳಿಗಿಂತ ಸ್ನೇಹಿತರ ಮೆಚ್ಚುಗೆ ಪಡೆಯುವ ಗುರಿ). ತಾನೇ ಯಾವುದೋ ಕಥೆಯ ನಾಯಕ ಪಾತ್ರದಲ್ಲಿದ್ದಂತೆ ಕನಸು...ಮತ್ತೆ ನಾಳೆಯ ತಯಾರಿ!

ಒಮ್ಮೊಮ್ಮೆ ಈ ಕಾಲ್ಪನಿಕ ಲೋಕದಲ್ಲಿ ಮುಳುಗಿ, ನಿಜ ಜೀವನದ ಆದ್ಯತೆ ಕಳೆದುಕೊಂಡು ಅವಾಂತರವೇ ಸಂಭವಿಸುತ್ತದೆ! ಎಲ್ಲ ಬರೀ ಕನಸಿನ ಹಿಂದೆಯೇ ಸುತ್ತುತ್ತಾ ವಾಸ್ತವತೆ ಮರೆತರೆ ಯಾವ ಕನಸೂ ನನಸಾಗದು, ಆ ಕನಸು ಇನ್ನ್ಯಾರದೋ ಪಾಲಾಗಿರುತ್ತದೆ. ಕೊನೆಗೆ ಈ ಜೀವನವೆಂಬುದು ಕಹಿ ವಾಸ್ತವವಾಗಿ ಉಳಿಯುವುದು. ಸುಂದರ ಕನಸ ಕಾಣಬೇಕು, ಆದರೆ ಅದನ್ನು ನನಸಾಗಿಸಲು ಶತ ಪ್ರಯತ್ನ ಮಾಡಬೇಕು, ಗುರಿ ತಲುಪುವವರೆಗೂ ಹಿಮ್ಮೆಟ್ಟಬಾರದು. ಇಲ್ಲದಿದ್ದರೆ ಆ ಕನಸು ಕನಸಾಗಿಯೇ ಉಳಿಯುವುದು ಜೀವನ ಪರ್ಯಂತ.... ಕನಸು ಎಂಬ ಕೈಗೆಟುಕದ ಗಗನ ಕುಸುಮ.. ●


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಮಹಿಳಾ ವಾಣಿ

### "ಮರೆಯಾದ ಮಿಸ್. ಹವಾ ಹವಾಯಿ"



ಉಮಾ ಮೂರ್ತಿ

**ಮೋ**ಹಕ ತಾರೆ, ಅತಿಲೋಕ ಸುಂದರಿ, ಪ್ರತಿಭಾನ್ವಿತ ನಟಿ, ಪದ್ಮಶ್ರೀ ಪುರಸ್ಕೃತ ಮೊದಲ ಮಹಿಳಾ ಸೂಪರ್ ಸ್ಟಾರ್ ಶ್ರೀದೇವಿ ಇನ್ನಿಲ್ಲ ಎಂಬ ಆಘಾತಕಾರಿ ಸುದ್ದಿಯನ್ನು ಸ್ನೇಹಿತೆ ಕೊಟ್ಟಾಗ ಎಲ್ಲರಂತೆ ನಾನೂ ಇದೊಂದು ಸುಳ್ಳುಸುದ್ದಿ ಆಗಿರಲಿ ಎಂದು ಬಯಸಿದ್ದೆ. ಆದರೆ ಬಯಕೆ ಈಡೇರಲಿಲ್ಲ. ನಿಧನದ ಸುದ್ದಿ ನಿಜವೇ ಆಗಿತ್ತು. ಕನ್ನಡದ ಅದ್ವಿತೀಯ ನಿರ್ದೇಶಕ ಪುಟ್ಟಣ್ಣ ಕಣಗಾಲ್, ಭಾವಗೀತೆಗಳ ಪ್ರಪಂಚವನ್ನೇ ನಮ್ಮೆದುರಿಗಿಟ್ಟ ಗಾನ ಗಾರುಡಿಗ ಸಿ. ಅಶ್ವತ್ಥ್ ಇಹಲೋಕ ಬಿಟ್ಟಾಗಲೂ ಇದೇ ತೆರನಾದ ಕಳೆದುಕೊಂಡ ನೋವು.

ಹಿಂದೊಮ್ಮೆ ಮೈಸೂರು ಅನಂತಸ್ವಾಮಿ ನಿಧನರಾದರು ಎಂದು ಸಹೋದ್ಯೋಗಿಯೊಬ್ಬರು ವಿಷಯ ತಿಳಿಸಿದಾಗ ದುಃಖ ತಡೆಯಲಾರದೆ ಅತ್ತು ಬಿಟ್ಟಿದ್ದೆ. ಆ ಸಹೋದ್ಯೋಗಿ ದೊಡ್ಡ joke ಮಾಡುವವರಂತೆ, "ಅನಂತಸ್ವಾಮಿ ನಿಮ್ಮ ಮಾವನೇ, ಸಂಬಂಧಿಕರೇ ಕಣ್ಣೀರಿಡಲು?" ಎಂದು ನಕ್ಕಿದ್ದರು. ಸಂವೇದನೆಗಳೇ ಅರ್ಥವಾಗದವರಿಗೆ ಉತ್ತರಿಸಬೇಕೆನಿಸಲಿಲ್ಲ, 'ಮನಕ್ಕೆ ಸ್ಪಂದಿಸಿದವರೇ ನಮ್ಮ ಸಂಬಂಧಿಗಳು' ಎಂದು.





ಮನರಂಜನೆ ನಮ್ಮ ಬದುಕಿನ ಒಂದು ಅವಿಭಾಜ್ಯ ಅಂಗ. ಸಮಯ ಕಳೆಯುವಲ್ಲಿ, ನೋವಾದಾಗ ನಗಿಸುವಲ್ಲಿ, ಮನಬಿಚ್ಚಿ ಹಾಡುವ ಸಂಗೀತ, ನೃತ್ಯದಲ್ಲಿ ಸಿನಿಮಾರಂಗ ನಮ್ಮ ಜೊತೆಯಾಗುತ್ತದೆ ಎನ್ನಬಹುದು. ಮೊದಲೆಲ್ಲ ಸಿನಿಮಾದವರು ನಿಧನರಾದಾಗ ಯಾರಾದರು ತುಂಬಲಾರದ ನಷ್ಟವೆಂದರೆ ಸುಮ್ಮನೆ ಮಾತಿಗೆ ಹೇಳುತ್ತಾರೆ ಎಂದುಕೊಳ್ಳುತ್ತಿದ್ದೆ. ಆದರೆ ನೆನಪು ಮಾತ್ರ ಆಗಿಹೋದ ಚಾಂದಿನಿಯ ಅಕಾಲಿಕ ಮರಣ ನಿಜವಾಗಲೂ "ತುಂಬಲಾರದ ನಷ್ಟ" ಅನ್ನುವುದರ ಅನುಭವ ಹಾಗೂ ಅರ್ಥ ಎರಡನ್ನೂ ಮಾಡಿಸಿತ್ತು.

ಚಿಕ್ಕಂದಿನಿಂದಲೂ ಶ್ರೀದೇವಿಯ ಚಿತ್ರಗಳನ್ನು ನೋಡುವುದೆಂದರೆ ಬಲು ಇಷ್ಟ. ಇವುಗಳಿಗೆ ಭಾಷೆಯ ತಡೆಗೋಡೆಗಳಿರುತ್ತಿರಲಿಲ್ಲ. ಕಲರ್ ಟಿ.ವಿ ಯ ಆರಂಭದ ದಿನಗಳು. ಶ್ರೀದೇವಿಯ ಚಿತ್ರದ ಹಾಡು ಬಂತೆಂದರೆ ಮಕ್ಕಳು ರಿಮೋಟ್ ಕೊಡುವುದೇ ಇಲ್ಲ ಎಂದು ಆಕ್ಷೇಪಿಸುತ್ತಿದ್ದ ಹಿರಿಯರೂ ಸಹ "ಮಿಸ್ಟರ್ ಇಂಡಿಯಾ" ಹಾಡು ಬರುತ್ತಿದ್ದಂತೆ ಒಂದು ಕ್ಷಣ ನಿಂತು ಹಾಡು ಮುಗಿಯುವವರೆಗೂ ನೋಡಿ ಹೋಗುತ್ತಿದ್ದರು. ಅಂಥಹಾ ಆಕರ್ಷಣ ಶಕ್ತಿ ಆ ಪ್ರತಿಭಾನ್ವಿತ ನಟಿಯ ಕಣ್ಣಿನಲ್ಲಿತ್ತು.

ನಟನೆಯಲ್ಲಿ ಪ್ರೇಕ್ಷಕರನ್ನು ನಗಿಸುವುದು ತುಂಬಾ ಕಷ್ಟದ ಕೆಲಸ. ಅದನ್ನು "ತಮಾಷೆ ಟೈಮಿಂಗ್" ಎಂದೂ ಕರೆಯುತ್ತಾರೆ. ಆದರೆ ಅಂಜು ಮಂಜು ಎಲ್ಲಾ ತಮಾಷೆಯ ಪಾತ್ರಗಳಿಗೆ ಸಂಪೂರ್ಣ ನ್ಯಾಯ ಒದಗಿಸಿ ಪ್ರೇಕ್ಷಕರನ್ನು ನಗೆಗಡಲಲ್ಲಿ ಮುಳುಗಿಸುತ್ತಿದ್ದಳು. ಈಗಲೂ, "ಒಕೆ ರಾಧ ಇದ್ದುರು ಕೃಷ್ಣುಲು" ತೆಲುಗು ಚಿತ್ರದ ಕೆಲವು ದೃಶ್ಯಗಳನ್ನು ನೆನಪಿಸಿಕೊಂಡಾಗ ತುಂಬಾ ನಗು ಬರುತ್ತದೆ. ತಮಾಷೆ ಟೈಮಿಂಗ್ ಅನ್ನುವುದು ಶ್ರೀದೇವಿಗೆ ಕರತಲಾಮಲಕ. ನಟನೆ, ನೃತ್ಯ, ಸೌಂದರ್ಯದ ಸಮ್ಮಿಲನವಾಗಿದ್ದ ಈ ತಾರೆಯ ೫೪ ವರ್ಷಗಳ ಬದುಕಿನಲ್ಲಿ ೫೦ ವರ್ಷಗಳು ಸಿನಿಮಾರಂಗದಲ್ಲಿ ಕಳೆದುಹೋದವು. ಜನಪ್ರಿಯ ನಿರ್ದೇಶಕ ಸುಭಾಷ್ ಘಾಯ್, "ಯಾವುದೇ ಒಂದು ಭಾಷೆಗೆ ಅಂಟಿಕೊಳ್ಳದೆಯೇ, ದಕ್ಷಿಣ ಸಿನೆಮಾರಂಗದಿಂದ ಹೊರಟು ಬಾಲಿವುಡ್ ನಲ್ಲಿ ತನ್ನದೇ ಸಾಮ್ರಾಜ್ಯ ಸ್ಥಾಪಿಸಿದ ಮೊದಲ ಮಹಿಳಾ ಸೂಪರ್ ಸ್ಟಾರ್, ಶ್ರೀದೇವಿಯ ನಟನಾ ಕೌಶಲ್ಯ ಹಾಗೂ ಸಿನೆಮಾ ಬದುಕು ಸಿನೆಮಾ ಶಾಲೆಗಳ ಪಠ್ಯ ಪುಸ್ತಕದಲ್ಲಿ ಸೇರ್ಪಡೆಯಾಗುತ್ತದೆ" ಎಂದು ಅಭಿಪ್ರಾಯಪಡುತ್ತಾರೆ.

ಜಿಮ್ ಕ್ಯಾರಿಯ "Truman Show" ಚಿತ್ರದಲ್ಲಿ Truman Burbank ಜೀವನ ನೋಡುತ್ತಾ ಉಳಿದವರು ಬೆಳೆಯುವಂತೆ, ನಾವೂ ಸಹ ಶ್ರೀದೇವಿಯ ಚಿತ್ರ ನೋಡುತ್ತಾ ಬೆಳೆದಿದ್ದೇವೆಂದು ಅನಿಸುತ್ತದೆ. "ಸದ್ಮಾ" ದಲ್ಲಿ ಇವಳಿಗಾಗಿ ಮರುಗಿದ್ದು, "ಚಾಲ್ ಬಾಜ್"ನಲ್ಲಿ ಪಾತ್ರಗಳ ಅದಲು ಬದಲಾಗಲು ಕಾದಿದ್ದು, "ಮಿಸ್ಟರ್ ಇಂಡಿಯಾ" ಹಲವು ಬಾರಿ ನೋಡಿದ್ದು, "ಲಮ್ಹೆ" ಯ ಹಾಡಿನ ನೃತ್ಯಕ್ಕೆ ಹೆಜ್ಜೆ ಹಾಕಲು ಪ್ರಯತ್ನಿಸಿದ್ದು, ಎಲ್ಲವನ್ನೂ ನೆನಪಿಸಿಕೊಂಡರೆ ಈಕೆ ಬೇರೆ ಯಾರೋ ಎಂದೆನಿಸುವುದಿಲ್ಲ. "English Vinglish" ಚಿತ್ರದಲ್ಲಿ ಸಶೀ ಯಾಗಿ ಹೇಳುವ ಕೊನೆಯ ಭಾಷಣಕ್ಕೆ ಚಪ್ಪಾಳೆ ತಟ್ಟದೇ ಯಾವುದಕ್ಕೆ ತಟ್ಟಲಿ? ನಮ್ಮನ್ನು ಸ್ಪಂದಿಸಿದ ಈ ತಾರೆಯ ಅಗಲಿಕೆಗೆ ಕಣ್ಣೀರಿಡದೇ ಇರಲು ಸಾಧ್ಯವೆ?.

ಕ್ಯಾಮೆರಾವನ್ನು ಪ್ರೇಕ್ಷಕನೆಂದು ಭಾವಿಸಿ ನಟಿಸುತ್ತಿದ್ದ ಈ ಮಹೋನ್ನತ ತಾರೆ ಪ್ರತಿಯೊಬ್ಬ ಪ್ರೇಕ್ಷಕನ ಭಾವನೆಯ ಬಾಗಿಲನ್ನು ತಟ್ಟಿದ್ದಾಳೆ ಎನ್ನುವುದಕ್ಕೆ ವಿಶ್ವಾದ್ಯಂತ ಇರುವ ಅಭಿಮಾನಿಗಳ ಕಂಬನಿಯೇ ಸಾಕ್ಷಿ. ಇವಳ ಅಗಲಿಕೆ ಮರೆಯಲಾರದ ನೋವು. ನಮ್ಮ ಬಾಲ್ಯ,ಯೌವನ, ಮಧ್ಯವಯಸ್ಸಿನ ಸಿನೆಮಾ ಸಂಗಾತಿ ಶ್ರೀದೇವಿ ತುಂಬು ಜೀವನ ನಡೆಸಿದ್ದಲ್ಲಿ?.. ಇನ್ನೆಷ್ಟು ಸಾಧನೆಗಳನ್ನು ಮಾಡುತ್ತಿದ್ದಳೋ ತಿಳಿಯದು. ಇವಳ ಅಸಾಧಾರಣ ಪ್ರತಿಭೆ, ಮೋಹಕ ನಗೆ, ತುಂಟತನ, ಜೊತೆ ಜೊತೆಯಾಗಿ ಬಂದ ಅಕಾಲಿಕ ಮರಣ ನೆನಪಿಸುವುದು ಡಾ॥ ಜಿ. ಎಸ್. ಶಿವರುದ್ರಪ್ಪನವರ "ವೇದಾಂತಿ ಹೇಳಿದನು" ಕವನದ ಕೆಲವು ಸಾಲುಗಳು.

*ವೇದಾಂತಿ ಹೇಳಿದನು ಈ ಬದುಕು ಶೂನ್ಯ*
*ಕವಿನಿಂತು ಸಾರಿದನು ಓ ಇದು ಅಲ್ಲ ಶೂನ್ಯ*
*ಜನ್ಮ ಜನ್ಮದಿ ಸವಿಯೇ ನಾ ಎಷ್ಟು ಧನ್ಯ ನಾ ಎಷ್ಟು ಧನ್ಯ!*

## ಕವನ

### ........ನೋಟ.....



ಲಕ್ಷ್ಮಿ ಕೊಲಾಲ್

ಕಾಡುವ ನಿನ್ನ ಆ ನೋಟವು ಅದೇನು ಮನಮೋಹಕ....
ನೋಟದ ಪುಟ್ಟ ಮಿಂಚಿನಲಿ ನಾ ಕಾಣುವೆ ಸೂರ್ಯನ ಬೆಳಕ.....
ಮಿಂದ ಈ ಮನಕ್ಕನಿಸಿದೆ ನಿತ್ಯ ರಶ್ಮಿಯ ಝಳಕ....
ನಾಚಿ ನೀರಾದ ಮೈ ಮನದಲಿ ಅದಮ್ಯ ಪುಳಕ.......!!

ಮಮತೆಯ ಮಡಿಲಾದ ಆ ನೋಟದಲಿ....
ಮಾದಕ ಮೃದುವಾದ ಕಿರುನೋಟದಲಿ....
ಸೆಳೆದೆ ನೀ ಆ ನೋಟದ ಸ್ಪರ್ಶದಲಿ....
ಹುಚ್ಚಾಯಿತು ಈ ಮನವು ನಲ್ಲ ನಿನ್ನ ನೋಟದಲಿ ......!!

ಕಳೆದಿರುವೆ ಜೀವನದ ನಾಲ್ಕಾರು ದಶಕ.......
ಆದರೂ ನಿನ್ನ ನೋಟದಲಿ ಮೀಯುವ ತವಕ.....
ಇದ ಬಯಸಿದೆ ಮನವು ಜೀವದಂತ್ಯದ ತನಕ....
ಮರುಕಳಿಸಲಿ ಈ ಪ್ರೀತಿಯು ಅನೇಕಾನೇಕ ಶತಕ.. ಶತಕ...!!


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## *"ಸೀರೆಲಿ ಹುಡುಗಿಯ ನೋಡಲೆಬಾರದು..*



ಕಾವ್ಯ ಕಡಮೆ ನಾಗರಕಟ್ಟೆ

"ಸೀರೆಲಿ ಹುಡುಗಿನ ನೋಡಲೆಬಾರದು ನಿಲ್ಲಲ್ಲ ಟೆಂಪ್ರೇಚರು.." ಕನ್ನಡ ಸಿನಿಮಾವೊಂದರ ಈ ಅಸಂಬದ್ಧ ಹಾಡನ್ನು ಮೊದಲ ಬಾರಿ ಕೇಳಿದಾಗ "ಟೆಂಪ್ರೇಚರು ಏಕೆ ನಿಲ್ಲಲ್ಲ?" ಎಂಬ ಪ್ರಶ್ನೆ ಸಹಜವಾಗಿ ಹುಟ್ಟಿತ್ತು. ಸೀರೆಯ ಬದಲಾಗಿ ಹುಡುಗಿಯೊಬ್ಬಳು ಜೀನ್ಸ್, ನೈಟಿ, ಚೂಡಿದಾರ್, ಶಾರ್ಟ್ಸ್ ಅಥವಾ ಬಿಕನಿ ತೊಟ್ಟಾಗ ಆ ಟೆಂಪ್ರೇಚರು ಸೀರೆಯುಟ್ಟಿದ್ದನ್ನು ಕಂಡ ದಿನದ ಹಾಗೆಯೇ ಏರಬಹುದೇ ಎಂಬ ಸಂದಿಗ್ಧವೂ ಕಾಡಿತ್ತು.

"ನೀನು ಸೀರೆ ಉಟ್ಟರೆ ಚೆನ್ನಾಗಿ ಕಾಣಿಸುತ್ತೀ" ಅಂತ ಯಾರೇ ಮೆಚ್ಚುಗೆ ವ್ಯಕ್ತಪಡಿಸಿದರೂ ಥ್ಯಾಂಕ್ಸ್ ಎಂದಷ್ಟೇ ಹೇಳಿ ಒಳಗೊಳಗೇ ನಾಚಿ ಖುಷಿಪಡುವುದನ್ನು ನಾವು ಬೆಳೆದ ಈ ಸಾಮಾಜಿಕ ಪರಿಸರವೇ ನಮಗೆ ಕಲಿಸಿದೆ. ಅದಕ್ಕೆ ಬದಲಾಗಿ "ನಿನಗೆ ಸೀರೆ ಚೆನ್ನಾಗಿ ಒಪ್ಪುತ್ತದೆ" ಎಂದು ಹೇಳಿದಾಗ "ಏಕೆ? ನಿಮಗೇಕೆ ಹಾಗನ್ನಿಸಿತು?" ಅಂತ ಹುಟ್ಟುವ ಹೊಸದನಿ ನಮ್ಮಲ್ಲಿ ವಿರಳವೇ. ಕಳೆದ ಶತಮಾನದ ದ್ವಿತೀಯಾರ್ಧದಲ್ಲಿ ಮಧ್ಯಮವರ್ಗದ ಅಸ್ಮಿತೆಯನ್ನು ರೂಪಿಸಿದ ಜನಪ್ರಿಯ ಕಾದಂಬರಿಗಳು "ಹಣೆಯ ತುಂಬ ಕುಂಕುಮವಿಟ್ಟು ಹೂ ಮುಡಿದು ಲಕ್ಷಣವಾಗಿ ಸೀರೆಯುಟ್ಟು ಬಂದಳು" ಎಂದು ಅನೇಕ ಕಾದಂಬರಿಕಾರರ ಬಳಿ ಬರೆಸಿಕೊಂಡವು. ಈ ವಾಕ್ಯದಲ್ಲಿ 'ಲಕ್ಷಣವಾಗಿ' ಎಂಬ ವಿಶೇಷಣ ನುಸುಳಿದ್ದು ಯಾವಾಗ? ಎಂದಿನಿಂದ? ಎಂಬ ಪ್ರಶ್ನೆಗೆ ಉತ್ತರವೂ ಸಿಗದೇ ಉಳಿಯುವುದು.



ಆಧುನಿಕತೆಯ ಸೋಗಿನಲ್ಲಿ ಜನಮಾನಸದ ಜೀವನಾಡಿಗಳಾಗಿರುವ ಮಹಿಳಾ ಆಂಕರ್ಗಳು ಟೀವಿಯಲ್ಲಿ ಹಬ್ಬದ ದಿನ ಮಾತ್ರ ಸೀರೆಯುಟ್ಟು, ಹೂ ಮುಡಿದು ಬರುವುದು ಏಕೆ? ನಮ್ಮ ಸಿನಿಮಾ ಹೀರೋಗಳು ಖಳನಾಯಕರ ಮುಂದೆ ಪ್ರತಿಜ್ಞೆ ಮಾಡುವಾಗ "ನಾನೇನು ಸೀರೆ ಉಟ್ಟು ಬಳೆ ತೊಟ್ಟುಕೊಂಡಿಲ್ಲ" ಎಂಬ ಜಂಭದ ಮಾತಿನ ಮೂಲ ಎಷ್ಟು ಆಳದಲ್ಲಿದೇ? ಶಾಲೆಯಲ್ಲಿ ವಿದ್ಯಾರ್ಥಿಗಳ ಅಭಿವೃದ್ಧಿ, ಸೌಖ್ಯಗಳ ಕುರಿತು ತಲೆಕೆಡಿಸಿಕೊಳ್ಳುವ ಸೋಗಿನಲ್ಲಿ ಮಹಿಳಾ ಉಪನ್ಯಾಸಕಿಯರ, ವಿದ್ಯಾರ್ಥಿನಿಯರ ಉಡುಪು ಮಾತ್ರ ಏಕೆ ಚರ್ಚೆಯಾಗಬೇಕು? ಹೆಣ್ಣಿನ ಅಂಗಾಗಗಳನ್ನು ಸೀರೆಯಲ್ಲದೇ ಬೇರೆ ಯಾವ ಆಧುನಿಕ ಉಡುಗೆಗಳಲ್ಲಿ ಕಂಡ ತಕ್ಷಣವೇ ಗಂಡಿನ ಮನೋ ಸ್ಥಿಮಿತ ತಪ್ಪಿ ಹೋಗುತ್ತದೆ ಎಂಬ ಮಾತು ಪ್ರಪಂಚದ ಗಂಡಸರನ್ನೆಲ್ಲ ಅವಮಾನಿಸಿದಂತೆಯೇ ಅಲ್ಲವೇ? ಹೆಣ್ಣು ಧರಿಸುವ ಉಡುಗೆಯ ಕುರಿತಾಗಿ "ಮರ್ಯಾದೆ ಬೇಡವೇ?" ಅಂತ ಕೇಳುವಾಗ ಆ ಪ್ರಶ್ನೆಯಲ್ಲಿ ಬರುವ 'ಮರ್ಯಾದೆ' ಪದದ ವ್ಯಾಖ್ಯಾನ ಯಾವ ಕಾಲದ್ದು? ಹೆಣ್ಣಿನ ಕುರಿತಾದ ಈ ಉದಾಸೀನದ, ಅವಮಾನದ ಉಗಮ ಎಲ್ಲಿಂದ ಶುರುವಾದದ್ದು?

ಕೇಂದ್ರ ಮಂತ್ರಿ ರಾಮದಾಸ ಅಥ್ವಾಲೆ ಚತ್ತೀಸಗಡದ ಕಮ್ಮಟವೊಂದರಲ್ಲಿ ಮಾತನಾಡುತ್ತ "ಮಂಗಳಮುಖಿಯರು ಸೀರೆ ಧರಿಸಬಾರದು" ಎಂದು ಹೇಳಿ ತಕ್ಷಣ ಮಾತಿನ ಧಾಟಿ ಬದಲಿಸಿದ್ದು ಕಳೆದ ವಾರ ಸುದ್ದಿಯಾಗಿತ್ತು. ಹೀಗಿರುವಾಗ ಈ 'ಸೀರೆ ಪುರಾಣ' ಕೇವಲ ಮಹಿಳೆಯರನ್ನಷ್ಟೇ ಸಂದಿಗ್ಧದಲ್ಲಿ ನೂಕುತ್ತದೆ ಎಂದೂ ಎನ್ನಲಾಗದು. ಇಂಥ ಘಟನೆಗಳನ್ನು ಪರಿಶೀಲಿಸಿದಾಗ ಸೀರೆಯೆಂಬುದು ಕೇವಲ ಒಂದು ಉಡುಪಾಗಿರದೇ ಅದಕ್ಕೊಂದು ಕಾಲ್ಪನಿಕ ಅರ್ಥಹೀನ ಘನತೆಯನ್ನು ನಮ್ಮ ಜನಪ್ರಿಯ ಕಾದಂಬರಿಗಳು, ಮಾಧ್ಯಮಗಳು ಕಾರಣವಿಲ್ಲದೇ ತೆರೆದು, ತುಸು ಗಾಳಿಯ ಹಾರುವಿಕೆಗೆ ವಹಿಸಬಲ್ಲ ಆರು ಗಜದ ಸೀರೆಯಲ್ಲಿ ಅಡಗಿರುವ ಮಜ ಅವತರಿಸಿರುವುದು ಎಲ್ಲಿ? ಸೀರೆಯು ಮುಚ್ಚಲಾರದ ಅಳಿದುಳಿದ ಅಂಗಾಂಗಗಳಲ್ಲೇ? ಅಥವಾ ತನ್ನಂತೆಯೇ ರಕ್ತ- ಮಾಂಸ ತುಂಬಿದ ಇನ್ನೊಂದು ಜೀವವನ್ನು ಕೇವಲ ಒಂದು ವಸ್ತುವಾಗಿ ಮಾತ್ರ ನೋಡಲು ಸಾಧ್ಯವಾಗುವ ಧಾಷ್ಟ್ಯದಲ್ಲೇ?

ಸೀರೆಯುಟ್ಟು ಹೆಮ್ಮೆ ಪಡುವುದು, ಡ್ರೆಸ್ಸು ಧರಿಸಿ ಕೀಳರಿಮೆ ಅನುಭವಿಸುವುದು ಎರಡೂ ನಮ್ಮನ್ನು ಬೆಳೆಸಿದ ಈ ಆವರಣವು ನಮಗೆ ಕಲಿಸಿದ ಕಟ್ಟುಕತೆಗಳೇ ಆಗಿವೆ. ಸೀರೆಯಷ್ಟೇ ಏಕೆ, ಯಾವ ವಸ್ತ್ರದ ತುಂಡಿಗೂ ಮಹತ್ವ ದೊರಕದಿರುವ ಸಮಯ ಮುಂದೊಮ್ಮೆ ಬಂದೇ ಬರುವುದು. ಅಷ್ಟೇ ಅಲ್ಲದೇ ಯಾರೂ ಯಾವ ಬಟ್ಟೆಯನ್ನೂ ಧರಿಸದ ಕಾಲವೂ ಮುಂದೆ ಬರಬಹುದು. ಆಗ ಅದೇ ನಮ್ಮ ನವಸಂಸ್ಕೃತಿಯಾಗಬಹುದು. ಹೀಗಿರುವಾಗ ಸಂಸ್ಕೃತಿಯ ರಕ್ಷಣೆಯು ಹೆಣ್ಣು ಧರಿಸುವ ಸೀರೆಯ ನಿರಿಗೆಗಳಲ್ಲಿ ಅಡಕವಾಗಿದೆ ಎಂಬ ಅರ್ಥ ಬರುವ ಮಾತು ಹಾಸ್ಯಾಸ್ಪದವಲ್ಲದೇ ಮತ್ತೇನು?

ನಾಗರಿಕತೆಯ ಸೂತ್ರ ತಿಳಿವ ಮೊದಮೊದಲು ಗುಂಪುಗುಂಪಾಗಿ ಓಡಾಡಿಕೊಂಡು ಗುಂಪು ಜಗಳಗಳಲ್ಲೇ ಒಡೆದುಹೋಗುತ್ತಿದ್ದ ಮನುಷ್ಯ, ಸಮಾಜವೆಂಬ ಸಂಸ್ಥೆಯನ್ನು ಕಟ್ಟಿಕೊಂಡಿದ್ದೇ ಒಬ್ಬರಿಗೊಬ್ಬರು ಪೊರೆಯಲು, ಸಾಂತ್ವನಗೊಳಿಸಲು, ಅಭಿವೃದ್ಧಿಯೆಡೆಗೆ ಸಾಗಲು. ಒಬ್ಬರಿಗೊಬ್ಬರು ಒಂಚೂರೂ ಸಂಬಂಧಪಡದ ಜನ ಒಟ್ಟಾಗಿ ಒಂದು ಸಮೂಹವಾಗಿ ಬಾಳಲು ಏನೇನೋ ಆಚರಣೆಗಳನ್ನು ಹುಟ್ಟಿಸಿಕೊಂಡೆವು, ಉಡುಗೆ-ತೊಡುಗೆಗಳಲ್ಲಿ ಏಕತೆಯನ್ನು ಪಾಲಿಸಿದೆವು. ಕ್ರಮೇಣ ಅರ್ಥವೇ ಇಲ್ಲದ ಆಚರಣೆಗಳಿಗೆ ಸಂಸ್ಕೃತಿಯ ಹೆಸರಿನಲ್ಲಿ ಕಟ್ಟುಬಿದ್ದೆವು. ಅಂಥ ರೂಢಿಗಳಲ್ಲಿ ಹೆಣ್ಣು ಸೀರೆಯನ್ನು ಮಾತ್ರ ಧರಿಸಬೇಕು ಎಂಬುದೂ ಒಂದು. ಮನುಷ್ಯನಿರುವುದಕ್ಕೆ ಆಚರಣೆಗಳೇ ಹೊರತು ಆಚರಣೆಗಳೇ ಮನುಷ್ಯನನ್ನು ಡಿಫೈನ್ ಮಾಡುತ್ತವೆ ಎಂಬುದು ಮೂರ್ಖತನವೇ ಸರಿ. ಉಡುಪು ಧರಿಸುವ ಹೆಣ್ಣಿಗೆ ಅಥವಾ ಗಂಡಿಗೆ ಯಾವ ವಸ್ತ್ರದಿಂದ ಕಂಫರ್ಟ್ ದೊರೆಯುತ್ತದೋ ಅದನ್ನು ಧರಿಸುವುದು ಅವರವರ ಆಯ್ಕೆ. ವೈಯಕ್ತಿಕ ಆಯ್ಕೆಯ ಬಗ್ಗೆ ಈ ಉದಾಸೀನವೇಕೆ? ಪ್ರಜಾಪ್ರಭುತ್ವ ಪಾಲಿಸುವ ದೇಶ ಎಂದು ಗೌರವದಿಂದ ಹೆಮ್ಮೆಯಿಂದ ಸಮಾಜವನ್ನು ಕಟ್ಟಿಕೊಂಡಮೇಲೆ ವೈಯಕ್ತಿಕ ಆಯ್ಕೆಗೆ ಮನ್ನಣೆ ಕೊಡದಿದ್ದರೆ ಢೋಂಗಿತನವಾಗಲಾರದೇ?

ಈ ಸೀರೆಯ ಕಟ್ಟು ಹೆಣ್ಣನ್ನಷ್ಟೇ ಅಲ್ಲದೇ ಗಂಡನ್ನೂ ಎಲ್ಲ ಕಾಲದಲ್ಲಿಯೂ ಬಾಧಿಸಿದೆ. ಇಷ್ಟದ ಹೆಣ್ಣು ಸೀರೆಯುಟ್ಟು ಬಂದರೆ ಮೆಚ್ಚಿಕೊಂಡು ಪ್ರಶಂಸಿಸಬೇಕು, ಎರಡೆರಡು ಬಾರಿ ತಿರುಗಿ ನೋಡಬೇಕು, ಆ ಬಗ್ಗೆ ರಾತ್ರಿಯೆಲ್ಲ ನಿದ್ದೆಗೆಟ್ಟು ಕನಸು ಕಾಣಬೇಕು ಎಂಬುದೆಲ್ಲ ಗಂಡಿನ ಮೇಲೆ ನಮ್ಮನ್ನೇ ಒಳಗೊಂಡ ನಮ್ಮ ಸಮಾಜ ಹೇರಿದ ಒತ್ತಡಗಳೇ. ಪೂರ್ವಗ್ರಹ ಪೀಡಿತ ಸಮೂಹದಿಂದ ಹೊರನಿಂತು ಏಕಾಂತದಲ್ಲಿ ಕಂಡಾಗ ಗಂಡಿಗೆ ತನ್ನ ಸಹಚರಳಾದ ಹೆಣ್ಣಿನ ಕುರಿತು ಅತಿ ಪ್ರಾಚೀನವಾದ ನೈಜ ಪ್ರೇಮ ಅನುಭವಕ್ಕೆ ಬರುವುದು. ಆಗ ಅವಳು ಧರಿಸುವ ಉಡುಪು ಗೌಣವಾಗುವುದು.

(ಕೊನೆಯ ಪುಟಕ್ಕೆ...)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಹಿನ್ನೋಟ

# ಅಶ್ರುತರ್ಪಣ


ಶ್ರೀ ಕಾಶಿನಾಥ್


ಶ್ರೀ ಚಂದ್ರಶೇಖರ


ಶ್ರೀ ಪುಟ್ಟಣ್ಣಯ್ಯ

---

# ಅಭಿನಂದನೆಗಳು


ಯುವ ಭಾರತ ಕ್ರಿಕೆಟ್ ತಂಡ


## ಬೃಂದಾವನ ವಸಂತೋತ್ಸವ–೨೦೧೮

ಏಪ್ರಿಲ್ ೨೮, ಶನಿವಾರ @ ಹೈಟ್ಸ್ ಟೌನ್ ಹೈ ಸ್ಕೂಲ್

ಪಂಚಾಂಗ ಶ್ರವಣ , ಬೇವು-ಬೆಲ್ಲ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ರಸ ಸಂಜೆ

ಜೊತೆಗೆ ಹಬ್ಬದೂಟ

ಅಭಿಮಾನಿ ತಂಡದಿಂದ ಆದರದ ಸ್ವಾಗತ

ಹೆಚ್ಚಿನ ವಿವರಗಳಿಗೆ ಭೇಟಿ ಕೊಡಿ www. Brindavana.org

## ನಾವು ನೋಡಿದ ಸಿನೆಮಾ







(..೧೪ನೇ ಪುಟದಿಂದ)

ಗಂಡಸೊಬ್ಬ ಯಾವುದೋ ಒಂದು ದಿನ ಇಷ್ಟಪಟ್ಟು ಸೀರೆ ಧರಿಸಿ ಬಂದರೆ ಮುಸಿಮುಸಿ ನಗುವಷ್ಟೇ ಅನರ್ಥದ ಸಂಗತಿ- ಹೆಣ್ಣಿಗೆ ಸೀರೆಯನ್ನೇ ಧರಿಸು ಎಂದು ಒತ್ತಾಯಿಸುವುದು. ತಮಗೆ ಇಷ್ಟವಾದ, ಕಂಫರ್ಟ್ ಅನ್ನಿಸುವ, ಆತ್ಮವಿಶ್ವಾಸ ಬಲಪಡಿಸುವ ಬಟ್ಟೆಯನ್ನು ಧರಿಸುವ ಸ್ವಾತಂತ್ರ್ಯ ಗಂಡು- ಹೆಣ್ಣುಗಳಿಬ್ಬರಿಗೂ ಸಮಾನವಾಗಿ ಇರಬೇಕು. ಇಷ್ಟಪಟ್ಟರೆ ಗಂಡಸರೂ ಸೀರೆ ಧರಿಸುವಂತಾಗಬೇಕು. ಪಂಚೆ, ಜೀನ್ಸ್, ಶಾರ್ಟ್ಸ್, ಚೂಡಿದಾರ ಮುಂತಾದ ಆಯ್ಕೆಯಂತೆಯೇ ಸೀರೆಯೂ ಒಂದು ಆಯ್ಕೆ ಅಷ್ಟೇ ಎಂಬ ಸತ್ಯ ನಮಗೆ ತಿಳಿದಿರಬೇಕು. ಸೀರೆಯನ್ನು ಹೆಣ್ತನಕ್ಕೆ ಕಟ್ಟುಹಾಕಿ, ಸಂಸ್ಕೃತಿ ರಕ್ಷಣೆಯನ್ನು, 'ಮರ್ಯಾದೆ'ಯಿಂದಿರುವ ಜವಾಬ್ದಾರಿಯನ್ನು ಹೆಣ್ಣಿನ ಮೇಲೆ ಮಾತ್ರ ಹೊರಿಸುವುದರಿಂದ ಸಹಬಾಳ್ವೆ, ಸಾಹಚರ್ಯದ ಸವಿ ಗಂಡು-ಹೆಣ್ಣುಗಳಿಬ್ಬರಿಗೂ ದಕ್ಕಲು ಸಾಧ್ಯವಿಲ್ಲ. ಹೀಗಿದ್ದಾಗ ಅವರನ್ನು ಒಳಗೊಂಡ ಸಮಾಜಕ್ಕಾದರೂ ನೆಮ್ಮದಿ ಅನುಭವಕ್ಕೆ ಸಿಗಲು ಸಾಧ್ಯವೇ?

ಸೀರೆಯುಡಬೇಕೋ, ಡ್ರೆಸ್ಸು ಧರಿಸಬೇಕೋ ಎಂಬ ಆಯ್ಕೆ ಹೆಣ್ಣಿಗೇ ಉಳಿಯಲಿ. ಸೀರೆಯು ಎಲ್ಲ ಉಡುಪುಗಳಂತೆಯೇ ಒಂದು ಉಡುಪು ಎಂಬ ಸತ್ಯ ನಮಗೆಲ್ಲ ಮನವರಿಕೆಯಾಗಲಿ. ಸೀರೆಗೆ ಅಂಟಿದ 'ಸಂಸ್ಕೃತಿ ರಕ್ಷಕ' ಕಳಂಕ ಕಳೆಯಲಿ. ಹುಡುಗಿಯೊಬ್ಬಳು ಸೀರೆಯುಟ್ಟಿದ್ದಾಳೆ ಎಂಬ ಒಂದೇ ಕಾರಣಕ್ಕೆ ಯಾರ ಟೆಂಪ್ರೇಚರೂ ಅಕಾರಣವಾಗಿ ಏರದೇ ಇರಲಿ. ಪರಸ್ಪರ ಸಮ್ಮತಿಯಿದ್ದಾಗ ಯಾವ ಉಡುಪು ಇರಲಿ ಇಲ್ಲದಿರಲಿ, ಸಹಜ ಪ್ರೇಮ ಫಲಿಸಲಿ. ●

## ಸದಸ್ಯತ್ವ ಮಾಹಿತಿ

ಬೃಂದಾವನ ಕನ್ನಡ ಕೂಟ ,ಕನ್ನಡ ಮತ್ತು ಕನ್ನಡಿಗರ ಪರವಾದ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ನ್ಯೂ ಜೆರ್ಸಿ ಮತ್ತು ಸುತ್ತ ಮುತ್ತ ಇರುವ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಎಂಬ ವಿನಂತಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ". ವಾರ್ಷಿಕ , ದ್ವೈ ವಾರ್ಷಿಕ , ಅಜೀವ ಅಥವಾ ವಿದ್ಯಾರ್ಥಿ ಸದಸ್ಯತ್ವಗಳಲ್ಲಿ ,ನಿಮಗೆ ಸೂಕ್ತವಾದ ಸದಸ್ಯತ್ವವನ್ನು ಆಯ್ಕೆ ಮಾಡಿ. ಈಗ ಸದಸ್ಯತ್ವ ಪರಿಪೂರ್ಣ ಇಲೆಕ್ಟ್ರಾನಿಕ್ ರೂಪದಲ್ಲಿ ಆನ್ಲೈನ್ ದೊರೆಯುತ್ತದೆ. www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ. ಕ್ಷಣಾರ್ಧದಲ್ಲಿ ನಿಮಗೆ e-mail ಮುಖೇನ ಸದಸ್ಯತ್ವದ ವಿವರ ಬಂದು ಸೇರುವುದು. ನಿಮ್ಮ ಈ ಬೃಂದಾವನ, Karnataka Cultural Organization - Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ. ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.
ಏನಾದರು ಪ್ರಶ್ನೆ ಇದ್ದಲ್ಲಿ president@brindavana.orgಗೆ ಇ-ಮೇಲ್ ಮಾಡಿ.
ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಎಲ್ಲರೂ ಸೇರಿ ಕನ್ನಡ ತಾಯಿ ಭುವನೇಶ್ವರಿಯನ್ನು ಆರಾಧಿಸಿ, ಕನ್ನಡದ ಕಂಪನ್ನು ಹರಡೋಣ.

**ಸೂಚನೆ:**

ನ್ಯೂಜೆರ್ಸಿಯ ಮತ್ತು ಸಮಸ್ತ ಕನ್ನಡದ ಸ್ನೇಹಿತರೆಲ್ಲರೂ "ಬೃಂದಾವನ ವಾಣಿ"ಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಆಶಯ. ವಾಣಿಯಲ್ಲಿ ಮೂಡಿಬರುವ ಅಂಕಣಗಳು-ಸಾಹಿತ್ಯವಾಣಿ,ವನಿತಾವಾಣಿ, ಪುಟಾಣಿ-ಪ್ರಪಂಚ, ಬಾಲಪ್ರತಿಭೆ, ಕ್ರೀಡ, ಅಮೇರಿಕಾ ನಾ ಕಂಡಂತೆ, ಯುವ ವಾಣಿ, ಸುತ್ತ-ಮುತ್ತ, ಹಾಗೇ ಸುಮ್ಮನೆ.. ಈ ಅಂಕಣಗಳಿಗೆ ಲೇಖನ,ಕವನ,ಕಥೆ, ಚುಟುಕುಗಳನ್ನು ಬರೆದು ಕಳಿಸಿ. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರುಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು ಕಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ಅಮೆರಿಕಾ ನಾ ಕಂಡಂತೆ** - ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.
ನಿಮ್ಮ ಅನಿಸಿಕೆ,ಸಲಹೆ,ಸೂಚನೆಗಳಿಗೆ ತಪ್ಪದೇ ತಿಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ವಿಶೇಷ ಸೂಚನೆ** : ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ, ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ. 'ಬೃಂದಾವನ ವಾಣಿ'ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.

'ಬೃಂದಾವನ ವಾಣಿ' ಮತ್ತು 'ಬೃಂದಾವನ' ಕನ್ನಡ ಕೂಟ ಯಾವುದೇ ಒಂದು ರಾಜಕೀಯ ಪಕ್ಷವನ್ನು , ಧರ್ಮವನ್ನು ಅಥವಾ ಪಂಗಡವನ್ನು ಪ್ರತಿನಿಧಿಸುವುದಿಲ್ಲ . ನಮ್ಮ ಧ್ಯೇಯ ಕರ್ನಾಟಕ ರಾಜ್ಯ, ಕನ್ನಡ ಭಾಷೆ , ಸಂಸ್ಕೃತಿ ಹಾಗು ಕನ್ನಡಿಗರ ಅಭ್ಯುಧಯ ಮಾತ್ರ.


Copyright © KCO – Brindavana